ಪಿಎಚ್.ಡಿ ಪದವಿಗಾಗಿ ಸಿದ್ಧಪಡಿಸಿದ ಮಹಾಪ್ರಬಂಧದಅಂತಿಮ ಸಾರಲೇಖ.

NAME OF THE SCHOLAR

Mrs. BHARATHI K.

RESEARCH SCHOLAR IN SANSKRIT
SRI DURGA CENTRE FOR PG STUDIES
& RESEARCH IN SANSKRIT. KATEEL
D.K. Dist. UNIVERSITY OF MANGALORE
KARNATAKA - 574148

NAME OF THE GUIDE

Dr. NAGARAJA B

PROFESSOR & GUIDE IN SANSKRIT
SRI DURGA CENTRE FOR PG STUDIES
& RESEARCH IN SANSKRIT. KATEEL
D.K. Dist. UNIVERSITY OF MANGALORE
KARNATAKA - 574148

SUBJECT : ಸಂಸ್ಕೃತ

TOPIC: "ಪಂಚಮಹಾಕಾವ್ಯಗಳಲ್ಲಿ ರಾಜಧರ್ಮ"
ಒಂದು ಸಮೀಕ್ಷಾತ್ಮಕ ಅಧ್ಯಯನ

~ ಅಧ್ಯಯನ ಕೇಂದ್ರ ~

ಶ್ರೀ ದುರ್ಗಾ ಸಂಸ್ಕೃತ ಸ್ನಾತಕೋತ್ತರ ಅಧ್ಯಯನ ಹಾಗೂ ಸಂಶೋಧನ ಕೇಂದ್ರ
ಕಟೀಲು, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ವಿಶ್ವವಿದ್ಯಾನಿಲಯ,
ಕರ್ನಾಟಕ – **574148**

ಪಂಚಮಹಾಕಾವ್ಯಗಳಲ್ಲಿ ರಾಜಧರ್ಮ–ಸಮೀಕ್ಷಾತ್ಮಕ ಅಧ್ಯಯನ

ವಿಷಯಸೂಚಿ

ವಿಷಯ	ಪುಟ ಸಂಖ್ಯೆ
೧. ಅಧ್ಯಾಯ – ೧ ಸಂಸ್ಕೃತ ಸಾಹಿತ್ಯದಲ್ಲಿ ರಾಜಧರ್ಮ	೧
೨. ಅಧ್ಯಾಯ – ೨ ರಘುವಂಶ ಮಹಾಕಾವ್ಯದಲ್ಲಿ ರಾಜಧರ್ಮ	೩
೩. ಅಧ್ಯಾಯ – ೩ ಕುಮಾರ ಸಂಭವ ಮಹಾಕಾವ್ಯದಲ್ಲಿ ರಾಜಧರ್ಮ	೫
೪. ಅಧ್ಯಾಯ – ೪ ಕಿರಾತಾರ್ಜುನೀಯ ಮಹಾಕಾವ್ಯದಲ್ಲಿ ರಾಜಧರ್ಮ	೮
೫. ಅಧ್ಯಾಯ – ೫ ಶಿಶುಪಾಲವಧ ಮಹಾಕಾವ್ಯದಲ್ಲಿ ರಾಜಧರ್ಮ	೧೦
೬. ಅಧ್ಯಾಯ – ೬ ನೈಷಧಚರಿತ ಮಹಾಕಾವ್ಯದಲ್ಲಿ ರಾಜಧರ್ಮ	೧೪
೭. ಉಪಸಂಹಾರ	೧೬

ಪಂಚಮಹಾಕಾವ್ಯಗಳಲ್ಲಿ ರಾಜಧರ್ಮ – ಸಮೀಕ್ಷಾತ್ಮಕ ಅಧ್ಯಯನ

ಅಧ್ಯಾಯ – ೧

ಸಂಸ್ಕೃತಸಾಹಿತ್ಯದಲ್ಲಿ ರಾಜಧರ್ಮ

ಸಂಸ್ಕೃತ ಭಾಷೆಯು ವಿಶ್ವದ ಪ್ರಾಚೀನ ಭಾಷೆಗಳಲ್ಲಿ ಒಂದು. ಭಾರತೀಯರ ಪ್ರಾಚೀನ ಸಂಸ್ಕೃತಿ ಮತ್ತು ಸಮಾಜವನ್ನು ಅರಿಯಲು ಸಂಸ್ಕೃತವೊಂದೇ ನಮಗೆ ಮಾರ್ಗದರ್ಶಕವಾಗಿದೆ. ಮಹಾಭಾರತದಲ್ಲಿ ಒಂದು ಉಕ್ತಿ ಇದೆ. **“ यदिहास्ति तदन्यत्र यन्नेहास्ति ननत् क्वचित्”**[1]ಈ ಮಾತು ಸಂಸ್ಕೃತಕ್ಕೂ ಅನ್ವಯಿಸುತ್ತದೆ. ಸಂಸ್ಕೃತವನ್ನು ಹಿಂದೆ ವೇದಭಾಷೆ, ದೇವಭಾಷೆ, ಅಮರವಾಣಿ, ಸುರಭಾರತೀ ಮುಂತಾದ ಶಬ್ದಗಳಿಂದ ಕರೆಯುತ್ತಿದ್ದರು. ಇಂದಿಗೂ ಸಂಸ್ಕೃತಭಾಷೆಯಲ್ಲಿ ಮಹಾಕಾವ್ಯ, ಖಂಡಕಾವ್ಯ, ಚಂಪೂಕಾವ್ಯ, ನಾಟಕ ಮುಂತಾದ ವಿವಿಧ ಪ್ರಕಾರದ ಕಾವ್ಯಗಳು ರಚನೆಯಾಗುತ್ತಿವೆ, ಪುರಾಣಗಳು, ಮನುಸ್ಮೃತಿ, ಭಗವದ್ಗೀತೆ ಮುಂತಾದ ಗ್ರಂಥಗಳು ವೇದದ ಮಹತ್ವವನ್ನು ಪ್ರತಿಪಾದಿಸಿವೆ. ಸಂಸ್ಕೃತವು ಉತ್ತರ ಭಾರತದ ಬಹುತೇಕ ಭಾಷೆಗಳಿಗೆ ಮಾತೃಸ್ಥಾನದಲ್ಲಿವೆ. ದಕ್ಷಿಣ ಭಾರತದ ದ್ರಾವಿಡ ಭಾಷೆಗಳ ಮೇಲೂ ಸಂಸ್ಕೃತವು ಸಾಂಸ್ಕೃತಿಕವಾಗಿ ಮತ್ತು ಸಾಹಿತ್ಯಕವಾಗಿ ಪ್ರಭಾವ ಬೀರಿವೆ.

ಸಂಸ್ಕೃತ ಭಾಷೆಯಲ್ಲಿನ ಸಾಹಿತ್ಯವನ್ನು ವೈದಿಕ ಸಾಹಿತ್ಯ ಮತ್ತು ಲೌಕಿಕ ಸಾಹಿತ್ಯ ಎಂದು ಎರಡು ವಿಭಾಗಗಳಾಗಿ ಮಾಡಬಹುದು. ಅತ್ಯಂತ ಪ್ರಾಚೀನ ಗ್ರಂಥವಾದ ಋಗ್ವೇದ ಹಾಗೂ ಇತರ ವೇದಗಗಳು, ಅವುಗಳ ಸ್ವರೂಪ ಹಾಗೂ ವೇದಾಂಗಗಳು ವೈದಿಕ ಸಾಹಿತ್ಯವೆಂದು ಕರೆಯಲ್ಪಡುತ್ತದೆ. ವೇದೋತ್ತರ ಕಾಲದ ಪುರಾಣಗಳು ಮತ್ತು ಸ್ಮೃತಿಗಳು ಅನಂತರ ರಚನೆಯಾದವು. ರಾಮಾಯಣ ಮತ್ತು ಮಹಾಭಾರತವನ್ನು ಲೌಕಿಕ ಸಂಸ್ಕೃತ ಸಾಹಿತ್ಯದ ಆದ್ಯ ಕೃತಿಗಳೆಂದು ಕರೆಯುತ್ತಾರೆ.

ಪುರಾಣಗಳು, ಮನುಸ್ಮೃತಿ, ಭಗವದ್ಗೀತೆ ಮುಂತಾದ ಗ್ರಂಥಗಳು ವೇದದ ಮಹತ್ವವನ್ನು ಪ್ರತಿಪಾದಿಸಿವೆ.“ಸಾಹಿತ್ಯ” ಎಂಬ ಪದವು ಶಬ್ದ ಮತ್ತು ಅರ್ಥಗಳ ಮೃದು ಮಧುರ ಮಿಲನವುಳ್ಳದ್ದಾಗಿದೆ. ಈ ಪದದ ವ್ಯುತ್ಪತ್ತಿಯನ್ನು ಪಂಡಿತರು ಹೀಗೆ ಹೇಳಿದ್ದಾರೆ–

“ सहितयोः भावः साहित्यम्”[2]

ಸಾಹಿತ್ಯ ಹಾಗೂ ಸಂಗೀತ– ಪಾರ್ವತೀ ಪರಮೇಶ್ವರರಂತೆ ಅಭಿನ್ನ. ಈ ಎರಡರಲ್ಲೂ ಅಭಿರುಚಿ ಇಲ್ಲದ ವ್ಯಕ್ತಿಯನ್ನು ಕೊಂಬು ಬಾಲವಿಲ್ಲದ ಪಶು ಎಂದು ಹೇಳಲಾಗಿದೆ.

“सङ्गीतसाहित्यकलाविहीनः साक्षात् पशुः पुच्छविषाणहीनः”[3]

---

1. ಮ.ಭಾ. 18.5.50
2. ಭ.ನೀ.ಶ
3. ಭ.ನೀ.ಶ

ಸಂಸ್ಕೃತ ಸಾಹಿತ್ಯದಲ್ಲಿ ಭಾರತೀಯ ಸಂಸ್ಕೃತಿಯು ಮೂರ್ತಿವೆತ್ತಾಗಿ ಮೈದಳೆದು, ನಾನಾ ರೂಪಗಳಲ್ಲಿ ವಿಕಾಸವಾಗಿ, ವಿಶ್ವಸಂಸ್ಕೃತಿಯ ಮೂಲವನ್ನು ತನ್ನಲ್ಲಿ ಹುದುಗಿಸಿಕೊಂಡಿದೆ. ಈ ಭಾರತೀಯ ಸಂಸ್ಕೃತಿಯು ಭಾರತದ ಪ್ರಾಕ್ತನ ಋಷಿ ಪುಂಗವರ ಮಾನಸ ಮಂದಿರಗಳಲ್ಲಿ ವೇದಗಳ ರೂಪದಲ್ಲಿ ಹೊಳೆದು, ವೇದಾಂಗ, ಉಪನಿಷತ್ತು, ಪುರಾಣ, ಇತಿಹಾಸ ಕಾವ್ಯಗಳಲ್ಲಿ ಬೆಳಗಿ, ಕಾವ್ಯ–ಮಹಾಕಾವ್ಯ–ಖಂಡಕಾವ್ಯಗಳ ಮೂಲಕ ಮೂಡಿಬಂದು ವಿಶ್ವಕ್ಕೆ ಮಾದರಿಯಾಗಿ ನಿಂತಿದೆ.

ಕಾವ್ಯವು ಒಂದು ಕಲೆ. ಅದು ಶಾಸ್ತ್ರಕ್ಕಿಂತ ಭಿನ್ನ. ಶಾಸ್ತ್ರದಲ್ಲಿ ಬುದ್ಧಿಗ್ರಾಹ್ಯ ವಿಚಾರ ಪ್ರತಿಪಾದನೆ **"सहितयो:भाव: साहित्यम्"।**ಪ್ರಧಾನವಾಗಿರುತ್ತದೆ.

ಕಾವ್ಯದಿಂದ ಹೊಮ್ಮುವ ರಸಕ್ಕೇ ಪ್ರಾಶಸ್ತ್ಯ. ಪ್ರತಿಭಾಶಾಲಿಯಾದವನೇ ಕವಿ. ಅವನ ಕರ್ಮವೇ ಕಾವ್ಯ. ಶಾಸ್ತ್ರವನ್ನು ವಿದ್ಯಾವಂತರೆಲ್ಲರೂ ತಿಳಿಯಲು ಶಕ್ಯವಿದೆ. ಆದರೆ, ಕಾವ್ಯದ ಸೌಂದರ್ಯವನ್ನು ಸಹೃದಯರಾದ ರಸಿಕರು ಮಾತ್ರ ಸವಿಯಬಲ್ಲರು.

ಕುಂತಕನೆಂಬ ಲಕ್ಷಣಕಾರನು ಹೇಳುವಂತೆ ಶಾಸ್ತ್ರದಲ್ಲಿ ಕಾರ್ಕಶ್ಯಾದಿ ದೋಷಗಳಿಂದ ಜನರಿಗೆ ಸಹಜಪ್ರವೃತ್ತಿಯೇ ದುಷ್ಕರ, ಆದರೆ ಕಾವ್ಯ ರೋಚಕವಾಗಿದ್ದು ಎಂತವರನ್ನಾದರೂ ಆಕರ್ಷಿಸಿಕೊಳ್ಳುತ್ತದೆ. ತತ್ವದರ್ಶನವಿದ್ದವನು ಶಾಸ್ತ್ರಕಾರನಾಗಬಹುದು. ಆದರೆ, ಕವಿಯೆನಿಸಬೇಕಾದರೆ ಅವನಿಗೆ ವರ್ಣನಾ ಕೌಶಲವೂ ಇರಬೇಕಾಗುತ್ತದೆ. ಕಾವ್ಯ ಜಗತ್ತಿನಲ್ಲಿ ಕವಿಗೇ ಚಕ್ರವರ್ತಿತ್ವ ಪದವಿ. ಅವನು ತನ್ನ ಪ್ರತಿಭಾನುಸಾರ ಸ್ವತಂತ್ರನಾಗಿ ಹೇಗೆ ಬೇಕಾದರೂ ಸೃಷ್ಟಿಮಾಡಬಹುದು.

ಆನಂದವರ್ಧನನು –

"अपारे काव्यसंसारे कविरेक: प्रजापति:

यथास्मै रोचते विश्वं तथेदं परिवर्तते"।।[4]

ಕಾವ್ಯಶರೀರ ಮತ್ತು ಕಾವ್ಯದ ಆತ್ಮ ಎಂದು ಕಾವ್ಯವನ್ನು ವಿಭಾಗಿಸಿ ಕೊಂಡರೆ ಈ ಎರಡು ಅಂಶಗಳಲ್ಲಿಯೂ ಶಬ್ದಾರ್ಥಗಳು ಗುಣಭರಿತವಾಗಿರಬೇಕು. ಬಾಹ್ಯಶರೀರದ ಸೌಂದರ್ಯವನ್ನು ಹೆಚ್ಚಿಸಲು ಶಬ್ದಾರ್ಥ ಅಲಂಕಾರಗಳೂ ಆತ್ಮರೂಪಿ ರಸ ಸೌಂದರ್ಯದ ಧರ್ಮಗಳಾದ ಕಾವ್ಯಗುಣಗಳೂ ಸ್ಪಷ್ಟವಾಗಿರಬೇಕು.

---

4. ಆನಂದ ವರ್ಧನ – ಧ್ವನ್ಯಾಲೋಕ ೩–೪೨

ಮಹಾಕಾವ್ಯಗಳು:-

ಮಹಾಭಾರತದ ತರುವಾಯ ಅಶ್ವಘೋಷ ಕಾಳಿದಾಸರ ಪರ್ಯಂತವಾಗಿ ಮದ್ಯಕಾಲದಲ್ಲಿ ರಚಿತವಾದ ಯಾವ ಮಹಾಕಾವ್ಯವೂ ನಮಗೆ ಉಪಲಬ್ಧವಾಗಿಲ್ಲ. ಸಾವಿರಾರು ವರ್ಷಗಳ ಈ ಕಾಲಾವಧಿಯಲ್ಲಿ ಅನೇಕ ಕಾವ್ಯಗಳು ರಚಿತವಾಗಿದ್ದುಈಗ ನಷ್ಟವಾಗಿರಬೇಕು,ಬಾಣ ಕಾಳಿದಾಸಾದಿಗಳು ಕೆಲವು ಪ್ರಾಚೀನ ಮಹಾಕವಿಗಳನ್ನು ಸ್ಮರಿಸುವುದರಿಂದಲೂ ಸೂಕ್ತಿಮುಕ್ತಾವಳಿ ಮುಂತಾದ ಗ್ರಂಥಗಳಲ್ಲಿ ಪ್ರಾಚೀನ ಕವಿ ಕಾವ್ಯಗಳ ನಾಮೋಲ್ಲೇಖವಿರುವುದರಿಂದಲೂ ಈ ಊಹೆ ಧೃಢಪಡುತ್ತದೆ.

ಮಹಾಕಾವ್ಯವು ಶ್ರವ್ಯಕಾವ್ಯಗಳ ಒಂದು ಪ್ರಭೇದ. ಇದನ್ನು ದಂಡಿಯು ಸರ್ಗಬಂಧವೆಂದು ಕರೆದು ಇದರ ಲಕ್ಷಣವನ್ನು ಹೀಗೆ ಹೇಳಿದ್ದಾನೆ. ಮಹಾಕಾವ್ಯದ ಆರಂಭದಲ್ಲಿ ಆಶೀಃ, ನಮಸ್ಕಾರ ಅಥವಾ ವಸ್ತುನಿರ್ದೇಶ (ಕಥಾಭಾಗದ ಒಂದಂಶದ ಉಪನಿಬಂಧ)ವಿರಬೇಕು. ವರ್ಣನೀಯ ಕಥೆ, ಇತಿಹಾಸವನ್ನೋ, ಸುಪ್ರಸಿದ್ಧ ವೃತ್ತಾಂತವನ್ನೋ ಆಶ್ರಯಿಸಿರಬೇಕು. ಚತುರ್ಮಾರ್ಗಫಲವು ಉದ್ದೇಶವಾಗಿದ್ದು, ನಾಯಕನು ಚತುರನೂ, ಉದಾತ್ತನೂ ಅಗಿರಬೇಕು. ಅದರಲ್ಲಿ ನಗರ, ಸಮುದ್ರ, ಪರ್ವತ, ಋತು, ಚಂದ್ರೋದಯ, ಸೂರ್ಯೋದಯ, ಉದ್ಯಾನ, ವಿಹಾರ, ಜಲಕ್ರೀಡೆ, ಮಧುಪಾನ, ಸುರತ, ವಿಪ್ರಲಂಭ, ವಿವಾಹ, ಕುಮಾರೋದಯ, ಮಂತ್ರಾಲೋಚನೆ, ದೂತಪ್ರೇರಣೆ, ದಂಡಯಾತ್ರೆ, ಯುದ್ಧ, ಪ್ರಧಾನ ನಾಯಕನ ವಿಜಯ ಈ ಹದಿನೆಂಟು ವರ್ಣನೆಗಳಿರಬೇಕು. ಅದು ಅಲಂಕಾರಯುಕ್ತವಾಗಿ ಅತಿ ಸಂಕ್ಷಿಪ್ತವಾಗದೆ ರಸಭಾವ ನಿರಂತರವಾಗಿರಬೇಕು.

ಪಂಚಮಹಾಕಾವ್ಯಗಳು:

ಕಾಳಿದಾಸ – ರಘುವಂಶ ಮತ್ತು ಕುಮಾರಸಂಭವ:
ಭಾರವಿ – ಕಿರಾತಾರ್ಜುನೀಯಮ್
ಮಾಘ – ಶಿಶುಪಾಲವಧ:
ಶ್ರೀಹರ್ಷ – ನೈಷಧೀಯ ಚರಿತಮ್

ಅಧ್ಯಾಯ – ೨

ರಘುವಂಶ:

ಇದು ಕಾಳಿದಾಸನ ಶ್ರೇಷ್ಠವಾದ ಮಹಾಕಾವ್ಯ. ಮಹಾಕವಿಯ ಕಾವ್ಯಕಲಾಪ್ರಜ್ಞೆಯ ಪೂರ್ಣತೆಯನ್ನಿಲ್ಲಿ ಕಾಣಬಹುದು. ಶಾಸ್ತ್ರಜ್ಞಾನ, ಲೋಕಾನುಭವಗಳು ಪಕ್ವವಾದಾಗ ಕವಿಪ್ರತಿಭೆಯು ಉಲ್ಲಸಿತವಾಗಿ ಎಂತಹ ಭವ್ಯನಿರ್ಮಾಣವನ್ನು ಮಾಡುವುದೆಂಬುದಕ್ಕೆ ರಘುವಂಶ ಉದಾಹರಣೆ.

"रघूणामन्वयं वक्ष्ये"ಎಂದಿರುವ ಕಾಳಿದಾಸನು ರಘುವಂಶದ ರಾಜರನ್ನು ತನ್ನ ಕಾವ್ಯದ ನಾಯಕರನ್ನಾಗಿ ಆರಿಸಿಕೊಂಡಿದ್ದಾರೆ. ಅನೇಕ ರಾಜರ ಕಥೆ ಇದ್ದರೂ ಯಾವುದೊಂದು ವರ್ಣನೆಯೂ ಸಹ ಪುನರುಕ್ತವಾಗಿಲ್ಲ.

पुराकवीनां गणनाप्रसङ्गे कनिष्ठिकाधिष्ठित कालिदासः

अद्यापि तत्तुल्यकवेरभावात् अनामिका सार्थवती बभूव ।[5]

ಎಂಬ ಒಂದು ಪ್ರಸಿದ್ಧವಾದ ಉಕ್ತಿ ಇದೆ. ಅಂದರೆ ಹಿಂದೆ ಪಂಡಿತರೆಲ್ಲ ಸೇರಿ ಉತ್ತಮರಾದ ಕವಿಗಳು ಯಾರಿದ್ದಾರೆ ಎಂದು ಗಣನೆಯನ್ನು ಮಾಡುವ ಸಂದರ್ಭದಲ್ಲಿ ಸಂಪ್ರದಾಯದಂತೇ ಕನಿಷ್ಠಿಕಾ ಬೆರಳಿನಿಂದ ಗಣನೆಯನ್ನು ಆರಂಭಿಸಿದರು. ಮೊತ್ತಮೊದಲನೆಯದಾಗಿ ಕಾಳಿದಾಸನಿಂದ ಆರಂಭಿಸಿದ ನಂತರ ಎರಡನೆಯದಾಗಿ ಕಾಳಿದಾಸನಿಗಿಂತ ಶ್ರೇಷ್ಠರು ಯಾರು ಎಂದು ನಿಷ್ಕರ್ಶೆ ಮಾಡಿದಾಗ ಅವನಿಗಿಂತ ಶ್ರೇಷ್ಠರಾದವರು ಇಂದಿಗೂ ದೊರಕಲೇ ಇಲ್ಲ. ಆದ್ದರಿಂದ ಗಣನೆಯಲ್ಲಿ ಕನಿಷ್ಠಿಕಾ ಬೆರಳಿನ ನಂತರದ ಬೆರಳಾದ ಅನಾಮಿಕಾ ಬೆರಳು ತನ್ನ ಹೆಸರಿನ ಸಾರ್ಥಕತೆಯನ್ನು ಪಡೆಯಿತು. ಅನಾಮಿಕಾ ಎಂದರೆ ಹೆಸರು ಇಲ್ಲ ಎಂದರ್ಥ. ಹೀಗೆ ಕಾವ್ಯ ಪ್ರಪಂಚದಲ್ಲಿಕವಿಕುಲಗುರು ಎಂದೆನಿಸಿಕೊಂಡವನು ಕಾಳಿದಾಸ.

ಕಾಳಿದಾಸನು ಈ ಮಹಾಕಾವ್ಯದಲ್ಲಿ ರಘುವಂಶದ ರಾಜರುಗಳ ವರ್ಣನೆಯನ್ನು ಮಾಡಿದ್ದಾನೆ. ೧೯ ಸರ್ಗಗಳಿಂದ ಕೂಡಿದ, ಈ ಮಹಾಕಾವ್ಯದ ಮೊದಲನೇ ಸರ್ಗವು ರಾಜಾ ದಿಲೀಪನ ವರ್ಣನೆಯಿಂದ ಆರಂಭವಾಗುತ್ತದೆ.ಇಡೀ ಮಹಾಕಾವ್ಯವು ರಾಜರುಗಳ ವರ್ಣನೆಯಿಂದ ಕೂಡಿದ್ದರಿಂದ ಎಲ್ಲಾ ಸರ್ಗಗಳಲ್ಲೂರಾಜಧರ್ಮವು ಹೇರಳವಾಗಿ ನಿರೂಪಿಸಲ್ಪಟ್ಟಿದೆ.

वागर्थाविव संपृक्तौ वागर्थप्रतिपत्तये ।

जगतः पितरौ वन्दे पार्वती परमेश्वरौ ॥[6]

ಶಬ್ದ ಮತ್ತು ಅರ್ಥಗಳು ಒಂದಕ್ಕೊಂದು ಸದಾ ಸೇರಿಕೊಂಡಿರುತ್ತದೆ. ಕೆಲವೊಮ್ಮೆ ಕೆಲವು ಶಬ್ದಗಳು ಸರಿಯಾದ ಸಮಯದಲ್ಲಿ ಉಚ್ಚರಿಸಲ್ಪಡದಿದ್ದರೆ ಆ ಸಂದರ್ಭಕ್ಕೆ ವಿಪರೀತವಾದ ಅರ್ಥ ಉಂಟಾಗುವ ಸಾಧ್ಯತೆಗಳಿರತ್ತವೆ. ಆದ್ದರಿಂದ ಕಾಳಿದಾಸನು ಸದಾಕಾಲ ಕೂಡಿಕೊಂಡೇ ಇರುವ ಶಬ್ದ ಮತ್ತು ಅರ್ಥದ ಸಿದ್ಧಿಗಾಗಿ ಜಗತ್ತಿನ ತಾಯಿ –ತಂದೆಗಳಾದ ಸದಾ ಒಂದೇ ಆಗಿರುವ ಪಾರ್ವತೀ –ಪರಮೇಶ್ವರರನ್ನು ನಮಸ್ಕರಿಸುತ್ತೇನೆ, ಎಂಬುದಾಗಿ ಶಿವಪಾರ್ವತಿಯರ ನಮಸ್ಕಾರದೊಂದಿಗೆ ಮಹಾಕಾವ್ಯವನ್ನು ಆರಂಭಿಸಿದ್ದಾನೆ. ಎರಡನೆಯ ಶ್ಲೋಕದಲ್ಲಿ ಸಂಪೂರ್ಣವಾದ ರಘುವಂಶದ ರಾಜರುಗಳ ಪ್ರತಿಷ್ಠೆಯನ್ನು ಎತ್ತಿ ಹಿಡಿದಿದ್ದಾನೆ ಕಾಳಿದಾಸ.

क्व सूर्यप्रभवो वंशः क्व चाल्पविषया मतिः ।

तितीर्षुर्दुस्तरं मोहादुडुपेनापि सागरम् ॥[7]

---

5. ರಘ.ವಂ.ಸ.
6. ರಘ.ವಂ.ಸ.1–1
7. ರಘ.ವಂ.ಸ.1–2

ಸೂರ್ಯನಿಂದ ಹುಟ್ಟಿರುವ ರಘುವಂಶವೆಲ್ಲಿ? ಸ್ವಲ್ಪವೇ ವಿಷಯವನ್ನು ತಿಳಿದುಕೊಂಡಿರುವ ನನ್ನ ಬುದ್ಧಿಯೆಲ್ಲಿ? ಆದರೂ ಆಸೆಗೆ ಒಳಪಟ್ಟು ಚಿಕ್ಕದೋಣಿಯಲ್ಲಿ ಸಮುದ್ರವನ್ನು ದಾಟಲು ಪ್ರಯತ್ನಿಸುತ್ತಿದ್ದೇನೆ ಎಂದು

ಕಾಳಿದಾಸನು ಹೇಳುತ್ತಾನೆ. ರಘುವಂಶವು ಸೂರ್ಯನಿಂದ ಹುಟ್ಟಿರುವ ವಂಶವಾಗಿದೆ. ಅತ್ಯಂತ ಶ್ರೇಷ್ಠರಾದ ರಾಜ–ಮಹಾರಾಜರನ್ನು ಹೊಂದಿರುವ ವಂಶವಾಗಿದೆ. ಸೂರ್ಯವಂಶದಲ್ಲಿ ಆಳ್ವಿಕೆ ನಡೆಸಿದ ಒಬ್ಬೊಬ್ಬ ರಾಜನೂ ಸೂರ್ಯನಿಗೆ ಸಮಾನನಾದ ಕಾಂತಿಯನ್ನು ಹೊಂದಿರುವವನು. ಪ್ರಜಾಪಾಲನೆಯಲ್ಲಿ, ರಾಜಧರ್ಮದ ಪಾಲನೆಯಲ್ಲಿ ಸೂರ್ಯವಂಶಿಯರನ್ನು ಮೀರಿಸುವ ರಾಜರುಗಳೇ ಇಲ್ಲ. ಆದ್ದರಿಂದ ಅವರ ಚರಿತ್ರೆಯನ್ನು ಹೇಳುವುದು ಬಹಳ ಕಷ್ಟಸಾಧ್ಯವೆಂದು ಕಾಳಿದಾಸನು ಅಭಿಪ್ರಾಯ ಪಡುತ್ತಾನೆ.

ರಘುವಂಶ ಮಹಾಕಾವ್ಯದಲ್ಲಿ ರಾಜಧರ್ಮ

ರಾಜ ಧರ್ಮವು ಬಹಳ ವಿಸ್ತಾರವಾದ ಅರ್ಥವ್ಯಾಪ್ತಿಯನ್ನು ಹೊಂದಿದೆ. ಕಾಳಿದಾಸನು ರಘುವಂಶ ಮಹಾಕಾವ್ಯದಲ್ಲಿ ಅಜ, ರಘು, ದಶರಥ, ಶ್ರೀರಾಮ ಮೊದಲಾದ ಉದಾತ್ತನಾಯಕರನ್ನು ವರ್ಣಿಸಿದ್ದಾನೆ. ಅದರ ಜೊತೆಗೆ ಅಗ್ನಿವರ್ಣನನ್ನೂ ಚಿತ್ರಿಸಿದ್ದಾನೆ. ರಘು ಮೊದಲಾದವರು ಉತ್ತಮ ರಾಜಧರ್ಮದ ದ್ಯೋತಕರಾದರೆ ಅಗ್ನಿವರ್ಣನು ರಾಜನಾದವನು ಹೇಗಿರಬಾರದೆಂಬುದರ ಪ್ರತಿಬಿಂಬವಾಗಿದ್ದಾನೆ.

ರಾಜನ ಮುಖ್ಯ ಕಾರ್ಯವೆಂದರೆ ಪ್ರಜಾರಕ್ಷಣೆ. ಪ್ರಜೆಗಳಿಗೆ ಉಂಟಾಗಬಹುದಾದ ಎಲ್ಲಾ ಅಪಾಯಗಳಿಂದ ಸರ್ವದಾ ರಕ್ಷಣೆ ನೀಡುವುದು ರಾಜನ ಆದ್ಯ ಕರ್ತವ್ಯವಾಗಿದೆ. ದೇಶದಲ್ಲಿ ಪ್ರಕೃತಿ ವೈಚಿತ್ರ್ಯಗಳಿಂದ ಹಲವು ದುರ್ಘಟನೆಗಳು ಸಂಭವಿಸಬಹುದು. ಉದಾಹರಣೆಗೆ ಭೂಕಂಪ, ಮಹೋತ್ಪಾತ, ಅತಿವೃಷ್ಠಿ, ಅನಾವೃಷ್ಠಿ, ಬೆಂಕಿ ಅನಾಹುತ ಮೊದಲಾದವುಗಳು. ಈ ಎಲ್ಲಾ ಪ್ರಾಕೃತಿಕ ವಿಕೋಪಗಳಿಂದ ದೇಶಕ್ಷೋಭೆ ಸಂಭವಿಸುತ್ತದೆ. ಆದ್ದರಿಂದ ರಾಜನು ಈ ಎಲ್ಲಾ ಪ್ರಕೃತಿ ವಿಕೋಪಗಳಿಗೆ ಸದಾ ಸಿದ್ಧನಾಗಿರಬೇಕು.

ಅಧ್ಯಾಯ– ೩
ಕುಮಾರಸಂಭವ ಮಹಾಕಾವ್ಯದಲ್ಲಿ ರಾಜಧರ್ಮ

ಕಾಳಿದಾಸನಿಂದ ರಚಿತವಾದ ಎರಡು ಮಹಾಕಾವ್ಯಗಳಲ್ಲಿ ಪ್ರೌಢತೆಯ ದೃಷ್ಟಿಯಲ್ಲಿ ರಘುವಂಶ ಮಹಾಕಾವ್ಯವು ಉತ್ಕೃಷ್ಟವೆನಿಸಿದರೂಕಾವ್ಯಸೌಂದರ್ಯದ ದೃಷ್ಟಿಯಲ್ಲಿ ಕುಮಾರಸಂಭವಕ್ಕೆ ಅಗ್ರಸ್ಥಾನ. ರಾಜಧರ್ಮವು ಬಹಳ ವಿಸ್ತಾರವಾದ ಅರ್ಥವ್ಯಾಪ್ತಿಯನ್ನು ಹೊಂದಿದೆ.

ಆರಂಭದಶ್ಲೋಕದಲ್ಲೇ –

अस्त्युत्तरस्यां दिशि देवतात्मा हिमालयो नाम नगाधिराजः।

पूर्वापरौ तोयनिधी वगाह्य स्थितः पृथिव्या इव मानदण्डः ॥[8]

ಉತ್ತರದಿಕ್ಕಿನಲ್ಲಿ ದೇವತೆಗೆ ಸಮಾನನಾದ ಹಿಮಾಲಯ ಎಂಬ ಹೆಸರುಳ್ಳ ಪರ್ವತರಾಜನು ಪೂರ್ವ ಹಾಗೂ ಪಶ್ಚಿಮ ಸಮುದ್ರದಲ್ಲಿ ಪ್ರವೇಶಿಸಿದ ಭೂಮಿಯ ಮಾನದಂಡವೇನೋ ಎಂಬಂತೆ ನಿಂತಿದ್ದಾನೆ. ಎಂಬುದಾಗಿ ಹಿಮಾಲಯದ ವರ್ಣನೆಯನ್ನು ಆರಂಭಿಸಿದ್ದಾನೆ. ಮಹಾಕಾವ್ಯವು ಶಿವಪಾರ್ವತಿಯರ ವಿವಾಹದ ಕಥಾವಸ್ತುವನ್ನುಹೊಂದಿದ್ದರಿಂದ ಬರುವ ಪಾತ್ರಗಳೆಲ್ಲವೂ ದೇವತೆಗಳೇ. ಉದಾಹರಣೆಗೆ ದೇವತಾತ್ಮನಾದ ಹಿಮಾಲಯಪರ್ವತ, ತಾರಕಾಸುರ, ಇಂದ್ರಾದಿದೇವತೆಗಳು. ಆದರೂ ಕೂಡ ಆ ಪಾತ್ರಗಳಲ್ಲೂ ಮಾನವೋಚಿತವಾದ ಭಾವವನ್ನು ನೋಡಬಹುದಾಗಿದೆ.

ರಾಜನೀತಿ ವ್ಯವಸ್ಥೆ/ ಚಿಂತನೆಗೆ ತೊಡಗುವಾಗ ಪ್ರಾಚೀನ ಶಾಸ್ತ್ರಗಳು ರಾಜನ ನೈತಿಕ ಶುಚಿತ್ವ ಹಾಗೂ ಜಿತೇಂದ್ರಿಯತ್ವಕ್ಕೆ ಹೆಚ್ಚು ಒತ್ತು ಕೊಡುತ್ತವೆ. ಶ್ರೀಮ ದ್ಭಾಗವತ ಪುರಾಣದ ಒಂದು ಮಾತು "ಜಿತಂ ವಿಶ್ವಂ ಜಿತೇ ರಸೇ" ಅಂದರೆ ನಾಲಿಗೆಯನ್ನು ಗೆದ್ದರೆ ವಿಶ್ವವನ್ನು ಗೆದ್ದಂತೆ ಎಂಬುದು ಇದರರ್ಥ. ನಾಲಿಗೆಯ ರುಚಿಯನ್ನು ಗೆಲ್ಲುವುದು ಅಂದರೆ ಕಾಮಚಾರ, ಕಾಮವಾದ, ಕಾಮಭಕ್ಷಣಗಳಿಂದ ದೋಷಗಳನ್ನು ಗೆಲ್ಲುವುದು, ಮನಬಂದಂತೆ ವರ್ತಿಸುವುದು, ಮನಸ್ಸಿಗೆ ತೋಚಿದ್ದನ್ನು ಹೇಳುವುದು ಹಾಗೂ ಮನಸ್ಸಿಗೆ ಬಂದದ್ದನ್ನು ತಿನ್ನುವುದು ಇವು ಮಾನವ ಶ್ರೇಯಸ್ಕರವಾದವುಗಳಲ್ಲ. ರಾಜನೀತಿಯ ನೇತೃತ್ವವನ್ನು ವಹಿಸಿದವನಿಗಂತೂ ಸರ್ವಥಾ ವರ್ಜ್ಯವಾದವುಗಳು. Stephon Coovey ಎಂಬ ಪಾಶ್ಚಾತ್ಯ ಚಿಂತಕ ತನ್ನ 8th habit ಎನ್ನುವ ಪುಸ್ತಕದಲ್ಲಿ private victory leads to public victory ಎಂದಿದ್ದಾನೆ. ಈ ಮಾತು ಈ ಮೇಲಿನ ವಿಚಾರಗಳಿಗೆ ಸಂವಾದಿಯಾಗಿದೆ. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಅಜಿತೇಂದ್ರಿಯರಾದ ರಾಜರು ತಮ್ಮ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ ಹಾಗೂ ಮಾತ್ಸರ್ಯಗಳಿಂದ ನಾಶಹೊಂದಿದ ದೃಷ್ಟಾಂತವನ್ನು ಹೇಳುತ್ತದೆ.

ಕಾಳಿದಾಸನ ಮಾಹಾಕಾವ್ಯಗಳಲ್ಲಿ ಒಂದಾದ ಕುಮಾರಸಂಭವವು ಪೌರಾಣಿಕ ಹಿನ್ನೆಲೆಯ ದೇವತಾಕಥೆಯೆನಿಸಿದರೂ ಸಾಂದರ್ಭಿಕವಾಗಿ ರಾಜನೀತಿಗೆ ಪೂರಕವಾದ ಅಂಶಗಳನ್ನು ಉಲ್ಲೇಖಿಸುತ್ತಾನೆ.ಜಿತೇಂದ್ರಿಯನಾದವನು ಹೇಗಿರುತ್ತಾನೆ ಎನ್ನುವುದಕ್ಕೆ ಕುಮಾರಸಂಭವದ ಪರಶಿವನೇ ಆದರ್ಶ. ಕಾಳಿದಾಸ ತನ್ನ ಕುಮಾರಸಂಭವದ ಮೂರನೆಯ ಸರ್ಗದಲ್ಲಿ ಮನ್ಮಥನು ಶಿವನನ್ನು ನೋಡಿದ ಬಗೆಯನ್ನು ವಿವರಿಸುವಾಗ"त्रियाम्बकं संयमिनं ददर्श"ಎಂದಿದ್ದಾನೆ. ಹಿಮವತ್ ಪರ್ವತ ಶಿಖರದಲ್ಲಿ ದೇವದಾರು ವೃಕ್ಷದ ಅಡಿಯಲ್ಲಿ ಪದ್ಮಾಸನದಲ್ಲಿ ಕುಳಿತ ಶಿವ, ಆ ಶಿವನ ಸೇವೆಗೆ ಪರಮಸುಂದರಿಯಾದ

---

8. ಕುಸಂ.ಸ.1–1

ಪಾರ್ವತಿಯನ್ನು ಹಿಮವಂತ ನೇಮಿಸಿದ. ಆ ಪಾರ್ವತಿಯಾದರೂ ಇವನ ಸತ್ಯಾಹ್ನಿಕಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಒಪ್ಪ ಓರಣವಾಗಿ ಮಾಡುತ್ತಿದ್ದಳು. ಪಾರ್ವತಿಯ ಅಲ್ಲಿನ ಸಂಚಾರ ಅವಳ ದೈಹಿಕ ಸೌಂದರ್ಯವು ಶಿವನನ್ನು ಆಕರ್ಷಿಸಲಿಲ್ಲ. ಏಕೆಂದರೆ ಅವನು ಸಂಯಮವಾಗಿದ್ದ. ಈ ಸಂದರ್ಭದಲ್ಲಿ ಕವಿ ಒಂದು ಲೋಕ ನೀತಿಯನ್ನು ಹೇಳುತ್ತಾನೆ. ವಿಕಾರಕ್ಕೆ ಕಾರಣವಾಗುವ ವಸ್ತುವಿನ ಅಥವಾ ವ್ಯಕ್ತಿಯ ಸಾಂಗತ್ಯ ಇದ್ದರೂ ಯಾರ ಮನಸ್ಸು ವಿಕಾರಗೊಳ್ಳುವುದಿಲ್ಲವೋ ಅವರೇ ಧೀರರು ಎಂದು.

ಹೀಗೆ ಕುಮಾರ ಸಂಭವದ ಮೂರನೇ ಸರ್ಗದಲ್ಲಿ ಆತ್ಮ ಸಂಯಮಿಯಾದ ಶಿವನ ಚಿತ್ರಣವಿದೆ. ಕುಮಾರ ಸಂಭವದ ಈ ಚಿಂತನೆ ರಾಜಕೀಯ ವ್ಯವಸ್ಥೆಯ ನೇತಾರನಾದವನು ಹೇಗಿರಬೇಕೆಂದು ಸೂಚ್ಯವಾಗಿ ಹೇಳುತ್ತದೆ. ಏಕೆಂದರೆ ಆಡಳಿತ ವ್ಯವಸ್ಥೆಯ ಚುಕ್ಕಾಣಿಯನ್ನು ಹಿಡಿದವನು ಆತ್ಮ ಸಂಯಮಿಯಾಗಿರಬೇಕಾಗುತ್ತದೆ. ಇಲ್ಲದಿದ್ದರೆ ಪ್ರಜೆಗಳೇ ಅವನ ಹಿಡಿತಕ್ಕೆ ಬರಲಾರರು. ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದ,

यद्यदाचरति श्रेष्ठ तत्त देवेतरो जनः ।

स यत् प्रमाणं कुरुते लोकस्तदनुवर्तते ॥ಭ.ಗೀ.ಅ೩.೨೧ಶ್ಲೋ॥

ಎಂಬ ಮಾತು ಸ್ಮರಣೀಯ. ಹೀಗೆ ಪೌರಾಣಿಕ ಕಥಾಂಶವನ್ನು ಒಳಗೊಂಡ ಕುಮಾರಸಂಭವವೂ ರಾಜನೈತಿಕ ಚಿಂತನೆಗೆ ಸಹಕಾರಿಯಾಗಿದೆ.

ಹೀಗೆ ಮಹಾಕವಿಯಿಂದ ರಚಿತವಾದ ಮಹಾಕಾವ್ಯವು ಹಿಮವಂತನ ಪುತ್ರಿಯಾದ ಪಾರ್ವತಿಯು ತಪಸ್ಸನ್ನಾಚರಿಸಿ ಶಿವನನ್ನೇ ಪತಿಯನ್ನಾಗಿ ಹೊಂದುತ್ತಾಳೆ. ಅವರಿಬ್ಬರಲ್ಲಿ ಜನಿಸುವ ಕುಮಾರನಿಂದ ತಾರಕಾಸುರನ ನಾಶ ಇದರ ಕಥಾವಸ್ತು. ಇಲ್ಲಿ ಯಾವುದೇ ರಾಜಮಹಾರಾಜರುಗಳ ವರ್ಣನೆ ಕಂಡು ಬರುವುದಿಲ್ಲ. ಶಿವನು ದಾಕ್ಷಾಯಣಿಯನ್ನು ಕಳೆದುಕೊಂಡು ಯಾವುದೋ ಒಂದು ಅಭಿಲಾಷೆಯಿಂದ ತಪಸ್ಸನ್ನಾಚರಿಸುವ ನಾಯಕನಾಗಿ ಈ ಮಹಾಕಾವ್ಯದಲ್ಲಿ ಚಿತ್ರಿತನಾಗಿದ್ದಾನೆ. ರಾಜಧರ್ಮವು ಈ ಮಹಾಕಾವ್ಯದಲ್ಲಿ ಎಲ್ಲೂ ಗೋಚರಿಸುವುದಿಲ್ಲ. ಆದರೂಕೂಡ ಕೆಲವೊಂದು ಕಡೆ ರಾಜನೀತಿಯ ಕುರುಹುಗಳನ್ನು ಗುರುತಿಸಬಹುದು.

ರಾಜನು ಸದಾ ಪ್ರಕೃತಿಪ್ರಿಯನಾಗಿರಬೇಕು. ಉದ್ಯಾನ–ಹೂವು–ಮರ–ಗಿಡ ಮುಂತಾದುವುಗಳನ್ನು ರಾಜ ಪ್ರೇಮಿಸಬೇಕು. ಸಾಮಾನ್ಯವಾಗಿ ರಾಜರುಗಳಿಗೆ ಪುಷ್ಪಗಳು ಸಂತೋಷವನ್ನು ನೀಡುವ ವಸ್ತುಗಳಾಗಿರುತ್ತವೆ.

ಹೀಗೆ ಸಮಗ್ರ ಕುಮಾರಸಂಭವ ಮಹಾಕಾವ್ಯವು ಹಿಮಾಲಯ, ಶಿವ–ಪಾರ್ವತಿ, ಕುಮಾರನ ಜನನ ಇತ್ಯಾದಿ ಅಂಶಗಳಿಂದ ಕೂಡಿದ್ದು ಅತ್ಯಂತ ಸುಮಧುರವಾದ ನಿರೂಪಣೆಯಿಂದ ಕೂಡಿದೆ. ರಾಜಧರ್ಮವು ಈ

ಮಹಾಕಾವ್ಯದಲ್ಲಿ ಸಾಕ್ಷಾತ್ ಗೋಚರಿಸದಿದ್ದರೂ ಸೂಕ್ಷ್ಮವಾಗಿ ಕಾಣಸಿಗುತ್ತದೆ. ರಾಜ ಹಾಗೂ ಪ್ರಕೃತಿಯ ಸಂಬಂಧವು ಹೇಗಿರಬೇಕು, ರಾಜನೊಬ್ಬ ದುಷ್ಟನಾದರೆ ಪ್ರಕೃತಿ ಹಾಗೂ ಸಮಾಜದಲ್ಲಿ ಆಗಬಹುದಾದ ದುಷ್ಪರಿಣಾಮಗಳು, ರಾಜನಿಗಿರಬೇಕಾದ ಇಂದ್ರಿಯನಿಗ್ರಹ–ಆತ್ಮಸಂಯಮ ಈ ಎಲ್ಲಾಅಂಶಗಳು ಇಲ್ಲಿ ಪ್ರತಿಬಿಂಬಿತವಾಗಿವೆ. ಇಂದ್ರಾದಿ ದೇವತೆಗಳು ಎಷ್ಟೇ ಪರಾಕ್ರಮಶಾಲಿಗಳಾಗಿದ್ದರೂ ತಾರಕಾಸುರನು ಬ್ರಹ್ಮನ ವರದ ಪ್ರಭಾವದಿಂದ ಇವರೆಲ್ಲರನ್ನೂ ನಿಗ್ರಹಿಸುವ ಶಕ್ತಿಯನ್ನು ಹೊಂದಿದ್ದನು. ಆಂದರೆ ಸ್ವಭಾವತಃ ದುಷ್ಟನಾದವನಿಗೆ ಮಂತ್ರ ಶಕ್ತಿ ಅಥವಾ ವರವು ದೊರೆತರೆ ಭೂಮಿಯಲ್ಲಿ ಯಾವ ಪರಿಸ್ಥಿತಿ ಉಂಟಾಗಬಹುದೆಂಬುದಕ್ಕೆ ತಾರಕಾಸುರನು ಸಾಕ್ಷಿಯಾಗಿದ್ದಾನೆ. ಅನಂತರ ಶಿವ ಪಾರ್ವತಿಯರ ವಿವಾಹದ ನಂತರ ಜನಿಸುವ ಕುಮಾರನಿಂದ ದುಷ್ಟನಾದ ತಾರಕಾಸುರನು ಹತನಾಗುತ್ತಾನೆ. ಹೀಗೆ ಮಹಾಕಾವ್ಯವು ಎಲ್ಲಾ ವಿಷಯಗಳನ್ನೊಳಗೊಂಡ ಅದ್ಭುತ ಕೃತಿಯಾಗಿದೆ.

ಅಧ್ಯಾಯ– ೪

ಕಿರಾತಾರ್ಜುನೀಯ ಮಹಾಕಾವ್ಯದಲ್ಲಿ ರಾಜಧರ್ಮ:

ಕಿರಾತಾರ್ಜುನೀಯವು ಸಂಸ್ಕೃತದ ಸುಪ್ರಸಿದ್ಧ ಮಹಾಕಾವ್ಯಗಳಲ್ಲಿ ಒಂದಾಗಿದೆ. ಈ ಮಹಾಕಾವ್ಯವು "ಬೃಹತ್ರಯೀ" ಯಲ್ಲಿ ಪ್ರಥಮಸ್ಥಾನವನ್ನು ಪಡೆದಿದೆ. ಕಾಲಿದಾಸನ ರಘುವಂಶ ಮಹಾಕಾವ್ಯಕ್ಕೂ ದೊರೆಯದಿರುವ ಗೌರವ ಈ ಮಹಾಕಾವ್ಯಕ್ಕೆ ದೊರೆತಿದೆ. ಕಾರಣ ಕಾವ್ಯದೃಷ್ಟಿಯಿಂದ ರಘುವಂಶಕ್ಕಿಂತಲೂ ಉತ್ಕೃಷ್ಟವಾದ ಕಾವ್ಯ ಇದಾಗಿದೆ. ವಿದ್ವಾಂಸರ ಅಭಿಪ್ರಾಯದಂತೆ ಇಡೀ ಸಂಸ್ಕೃತ ಸಾಹಿತ್ಯದಲ್ಲಿ ಸರಳತೆ, ಕೋಮಲತೆ, ಜ್ಞೇಯ ಪದಾವಳಿ, ಮುಂತಾದ ಶಾಸ್ತ್ರೀಯ ಕಾವ್ಯಲಕ್ಷಣವನ್ನು ಹೊಂದಿದ ಇನ್ನೊಂದು ಕೃತಿ ಕಿರಾತಾರ್ಜುನೀಯಕ್ಕೆ ಸಮಾನವಾಗಿ ಇಲ್ಲವೆಂದು ಹೇಳುತ್ತಾರೆ. ಚಿಕ್ಕ– ಚಿಕ್ಕ ಪದಗಳನ್ನು ಜೋಡಿಸಿ ಸುಲಲಿತವಾಗಿ ಕಿವಿಗೆ ಸಂತೋಷವನ್ನುಂಟು ಮಾಡುತ್ತಾ ಮನೋಹರವಾದ ಅರ್ಥಗೌರವದಿಂದ ಈ ಕಾವ್ಯವು ಶೋಭಿಸುತ್ತದೆ. ಆದ್ದರಿಂದ **"भारवेरर्थगौरवम्"**ಎಂಬ ಮಾತು ಪ್ರಸಿದ್ಧವಾಗಿದೆ. ಇಂತಹ ಪರಮೋತ್ಕೃಷ್ಟ ಮಹಾಕಾವ್ಯವನ್ನು ರಚಿಸಿದವನು ಭಾರವಿ.

ಭಾರವಿಯು ಕಿರಾತಾರ್ಜುನೀಯವನ್ನು ಮಹಾಭಾರತದ ವನಪರ್ವದಲ್ಲಿ ಇರುವ ಒಂದು ಘಟನೆಯನ್ನಾಧರಿಸಿ ಅದೊಂದು ಮಹಾಕಾವ್ಯವಾಗಲು ಬೇಕಾಗುವ ಎಲ್ಲಾ ಅಂಶಗಳನ್ನು ಸೇರಿಸಿ ರಚಿಸಿದ್ದಾನೆ. ಮಹಾಕಾವ್ಯದ ಸರ್ಗಾರಂಭವು ವನದಲ್ಲಿರುವ ಯುಧಿಷ್ಠಿರನ ಬಳಿ ಒಬ್ಬ ವನೇಚರನು ಬರುವುದರಿಂದ ಆರಂಭವಾಗಿದೆ. ವನೇಚರನು ಯುಧಿಷ್ಠಿರನಿಗೆ ದುರ್ಯೋಧನನ ವೃತ್ತಾಂತವನ್ನು ಅರಹುತ್ತಾನೆ. ಅನಂತರ ವನೇಚರ ವೃತ್ತಾಂತವನ್ನು ಧರ್ಮರಾಜನು ದ್ರೌಪದಿಗೂ, ತನ್ನ ಸಹೋದರರಿಗೂ ತಿಳಿಸುತ್ತಾನೆ. ಕೋಪಗೊಂಡ

ಭೀಮನನ್ನು ತನ್ನ ಮಾತುಗಳಿಂದ ಧರ್ಮರಾಜನು ಸಮಾಧಾನಗೊಳಿಸುತ್ತಾನೆ. ಆಗ ಅಲ್ಲಿಗೆ ಬಂದ ವೇದವ್ಯಾಸರು ಅರ್ಜುನನನ್ನು ತಪಸ್ಸಿಗೆ ಕಳುಹಿಸುವಂತೆ ಸಲಹೆ ನೀಡುತ್ತಾರೆ. ದ್ರೌಪದಿಯೂ ಅರ್ಜುನನನ್ನು ಪ್ರೇರೇಪಿಸುತ್ತಾಳೆ. ಇಂದ್ರನ ಆದೇಶದಂತೆ ಅರ್ಜುನನು ಶಂಕರನ ಕುರಿತು ತಪಸ್ಸನ್ನಾಚರಿಸುತ್ತಾನೆ. ಕಿರಾತನ ವೇಷವನ್ನು ಧರಿಸಿ ಬಂದ ಶಿವನಿಗೂ ಅರ್ಜುನನಿಗೂ ಘೋರಯುದ್ಧವು ನಡೆದು ಕೊನೆಗೆ ಶಂಕರನು ಪಾಶುಪತಾಸ್ತ್ರವನ್ನು ಪ್ರದಾನ ಮಾಡುತ್ತಾನೆ.

ಈ ಮಹಾಕಾವ್ಯವು ರಾಜನೀತಿ ಪ್ರಧಾನವಾದ ಮಹಾಕಾವ್ಯವಾಗಿದೆ. ಕ್ರೂರನಾದ ಹಾಗೂ ಅಹಂಕಾರಿಯಾದ ಶತ್ರುವಿನ ವಿರುದ್ಧ ಸೇಡು ತೀರಿಸಿಕೊಳ್ಳುವ ಆಲೋಚನೆಯಿಂದಲೇ ಈ ಕಾವ್ಯದ ಆರಂಭವಾಗಿದೆ. ಸಂಪೂರ್ಣವಾಗಿ ವೀರರಸ ಪ್ರಧಾನವಾದ ಈ ಕಾವ್ಯದಲ್ಲಿ ಆರಂಭದಲ್ಲಂತೂ ಸಂಪೂರ್ಣವಾಗಿ ರಾಜನೀತಿ ಹಾಗೂ ರಾಜಧರ್ಮದ ವಿಷಯವನ್ನೇ ನಿರೂಪಿಸಲಾಗಿದೆ.

ಮೊದಲನೆಯ ಸರ್ಗದ ಆರಂಭದಲ್ಲಿ ಕುರುರಾಜನಾದ ದುರ್ಯೋಧನನ ರಾಜ್ಯಭಾರ ಹಾಗೂ ಪ್ರಜೆಗಳ ಜೊತೆ ಅವನ ವ್ಯವಹಾರವನ್ನು ತಿಳಿದುಕೊಳ್ಳಲು ಕಳುಹಿಸಿದ ವನೇಚರನು ಯುಧಿಷ್ಠಿರನ ಬಳಿ ಬಂದು ಯುಧಿಷ್ಠಿರನಿಗೆ ನಮಸ್ಕರಿಸಿ ಏಕಾಂತದಲ್ಲಿ ಹಸ್ತಿನಾಪುರದ ಎಲ್ಲಾ ಸಮಾಚಾರವನ್ನು ಹೇಳುತ್ತಾನೆ.

ಯುವರಾಜನಾದ ದುರ್ಯೋಧನನು –

विशंकमाना भवतः पराभवं नृपासनस्थेपि वनाधिवासिनः ।

दुरोदरच्छद्मजिता समीहते नयेन जेतुं जगतीसुयोधनः॥[10]

ದ್ಯೂತಕ್ರೀಡೆಯ ಮೂಲಕ ಮೋಸದಿಂದ ಪಾಂಡವರಿಂದ ರಾಜ್ಯವನ್ನು ಅಪಹರಿಸಿ ತಾನು ಸಿಂಹಾಸನದ ಅಧಿಕಾರವನ್ನು ಹೊಂದಿದ್ದರೂ ವನದಲ್ಲಿರುವ ಪಾಂಡವರ ಕುರಿತಾಗಿ ಭಯವನ್ನು ಹೊಂದಿದ್ದಾನೆ. ಆದ್ದರಿಂದ ನ್ಯಾಯಪೂರ್ಣವಾಗಿ ಶಾಸನವನ್ನು ಮಾಡುತ್ತಾ ಪ್ರಜೆಗಳನ್ನು ತನ್ನತ್ತ ಸೆಳೆಯುವತ್ತ ಪ್ರಯತ್ನ ಮಾಡುತ್ತಿದ್ದಾನೆ.ಈ ಶ್ಲೋಕದಲ್ಲಿ ಧರ್ಮರಾಜನ ರಾಜ್ಯಭಾರವು ಅತ್ಯಂತ ನ್ಯಾಯಯುತವಾಗಿ ಪ್ರಜೆಗಳಿಗೆ ಸಂತೋಷದಾಯಕವಾಗಿತ್ತು.

ಒಬ್ಬ ರಾಜನ ಪರಾಕ್ರಮವು ಸಿದ್ಧವಾಗುವುದು ಕೇವಲ ಅವನ ಶಕ್ತಿ–ಸಾಮರ್ಥ್ಯದಿಂದ ಮಾತ್ರ ಅಲ್ಲ, ಅದು ಗುಣವನ್ನೂ ಅವಲಂಭಿಸಿರುತ್ತದೆ. ಯಾರಲ್ಲಿ ಉತ್ಸಾಹವಿರುವುದಲ್ಲವೋ ಅವನ ಬಳಿ ಸಫಲತೆಯು ಬರುವುದಿಲ್ಲ. ಆದರೆ ಉಜ್ವಲವಾದ ಕೀರ್ತಿಯನ್ನು ಪಡೆಯುವುದಕ್ಕಾಗಿ, ನ್ಯಾಯಯುತವಾದ ಮಾರ್ಗದಿಂದ

---

10. ಕಿ.ರಾ.ಸ. 1–2

ಇನ್ನೊಬ್ಬರಿಗೆ ಯಾವುದೇ ಕೆಡುಕು ಉಂಟಾಗದಂತೆ ಸುಖವನ್ನು ಪಡೆಯುವುದಕ್ಕಾಗಿ, ಸಾಮಾನ್ಯ ಮನುಷ್ಯನಿಂದ ಸಾಧ್ಯವಾಗದ ಅಸಾಧಾರಣ ಕಾರ್ಯವನ್ನು ಅತ್ಯುತ್ಸಾಹದಿಂದ ಮಾಡಲು ಹೊರಟವನಿಗೆ ಸಫಲತೆ ಎನ್ನುವುದು ಅತ್ಯಂತ ಶೀಘ್ರವಾಗಿ ದೊರೆಯುತ್ತದೆ.

स क्षत्रियस्त्राण सहः सतां यस्तत्कार्मुकं कर्मसु यस्य शक्तिः ।

वहन्द्वयीं यद्य फलेर्थजाते करोत्य संस्कारहतामिवोक्तिम् ॥[11]

ಯಾರು ಸತ್ಪುರುಷರ ರಕ್ಷಣೆಯನ್ನು ಮಾಡುವಲ್ಲಿ ಸಮರ್ಥರಾಗಿರುತ್ತಾರೋ ಅವನನ್ನು ಕ್ಷತ್ರಿಯನೆಂದು ಕರೆಯಲಾಗುತ್ತದೆ. ಅವನು ಮಾತ್ರ ಸಮರ್ಥನಾದ ರಾಜನಾಗಲು ಯೋಗ್ಯನಾಗಿರುತ್ತಾನೆ. ಅದೇ ರೀತಿ ಯಾವ ಶಸ್ತ್ರವು ರಣಭೂಮಿಯಲ್ಲಿ ತನ್ನ ಶಕ್ತಿಯನ್ನು ತೋರಿಸಲು ಸಮರ್ಥವಾಗಿರುತ್ತದೆಯೋ ಅದನ್ನು ಧನಸ್ಸು ಎಂದು ಕರೆಯುತ್ತಾರೆ. ಯಾರು ಸತ್ಪುರುಷರ ರಕ್ಷಣೆ ಮಾಡಲು ಅಸಮರ್ಥರಾಗಿರುತ್ತಾರೋ ಅವರು ಕ್ಷತ್ರಿಯನೆಂದು ಅನ್ನಿಸಿಕೊಳ್ಳುವುದಿಲ್ಲ. ರಾಜನು ಯಾವುದೇ ಕಠಿಣ ಪರಿಸ್ಥಿತಿಯಲ್ಲೂ ಸತ್ಪುರುಷರ ರಕ್ಷಣೆ ಮಾಡಬೇಕು. ಹಾಗೂ ಅವನ ಶಸ್ತ್ರವು ಯುದ್ಧಭೂಮಿಯಲ್ಲಿ ಶತ್ರುವಿನ ವಿರುದ್ಧ ಹೋರಾಡಲು ಸಮರ್ಥವಾಗಿರಬೇಕು. ಇಲ್ಲದಿದ್ದರೆ ಅವನ ಜನ್ಮವು ವ್ಯರ್ಥವೆನಿಸಿಕೊಳ್ಳುತ್ತದೆ.

ಅಧ್ಯಾಯ – ೫
ಶಿಶುಪಾಲವಧ ಮಹಾಕಾವ್ಯದಲ್ಲಿ ರಾಜಧರ್ಮ

ಮಾಘಕವಿ ವಿರಚಿತವಾದ ‘‘ಶಿಶುಪಾಲವಧ’’ ಕ್ಕೆ ‘‘ಮಾಘ’’ ಎಂಬ ಕವಿಯ ಹೆಸರೇ ರೂಢಿಯಲ್ಲಿರುವುದು ಒಂದು ವಿಶೇಷ.

“काव्येषु माघ:”“कविषु कालिदास:”[12]

ಎಂಬ ಉಕ್ತಿ ಇದನ್ನು ಸಮರ್ಥಿಸುತ್ತದೆ. ಕಾವ್ಯದ ವೈಶಿಷ್ಟ್ಯವನ್ನು ಕುರಿತು ಹಿಂದಿನ ಪಂಡಿತರು ಹೀಗೆ ಹೇಳುತ್ತಿದ್ದ ಉಕ್ತಿಯಿದು.–

उपमा कालिदसस्य भारवेरर्थ गौरवम् ।

दण्डिनः पदलालित्यं माघे सन्ति त्रयो गुणाः ॥[13]

‘‘ಉಪಮೆಗೆ ಕಾಲಿದಾಸ, ಅರ್ಥಗಾಂಭೀರ್ಯಕ್ಕೆ ಭಾರವಿ, ಲಲಿತಪದ ವಿನ್ಯಾಸಕ್ಕೆ ದಂಡಿ ಕವಿಗಳು ಪ್ರಸಿದ್ಧರು. ಈ ಮೂರೂ ಗುಣಗಳು ಮಾಘಕಾವ್ಯದಲ್ಲಿವೆ.

11. ಕಿ.ರಾ. ಸ. 3–48
12. ಸಾ.ಚ.
13. ಭಾ.ಸಾ.ಚ

ಭಾರವಿಯನ್ನು ಮೀರಿಸಬೇಕೆಂಬ ಏಕೈಕ ಉದ್ದೇಶದಿಂದಲೇ ಮಾಘನು " ಶಿಶುಪಾಲ ವಧ" ಎಂಬ ಮಹಾಕಾವ್ಯವನ್ನು ರಚಿಸಿರುವುದು ಕಂಡುಬರುತ್ತದೆ. ಈ ಅಂಶದಿಂದ ಮಾಘನು ಭಾರವಿಯ ಅನಂತರ ಅಂದರೆ ಕ್ರಿ.ಶ ಸುಮಾರು ಏಳನೆಯ ಶತಮಾನದವನೆಂದು ಹೇಳಬಹುದು. ಶಿಶುಪಾಲ ವಧ ಮಹಾಕಾವ್ಯವು ಮಾಘನ ಏಕೈಕ ಕೃತಿ. ಇದರಲ್ಲಿ ೨೦ ಸರ್ಗಗಳುಇವೆ. ಕಥಾವಸ್ತುವನ್ನು ಮಹಾಭಾರತದಿಂದಲೇ ತೆಗೆದು ಕೊಂಡಿದ್ದಾನೆ. ಕಿರಾತಾರ್ಜುನೀಯದಲ್ಲಿ ಕಂಡು ಬರುವ ಎಲ್ಲಾ ಕಾವ್ಯಾಂಶಗಳು ಇಲ್ಲಿ ಕಂಡುಬರುತ್ತವೆ. ಎರಡೂ ಮಾಹಾಕಾವ್ಯಗಳು "ಶ್ರೀ"ಶಬ್ದದಿಂದ ಪ್ರಾರಂಭವಾಗುತ್ತವೆ. ರಾಜನೀತಿಯ ಸೊಗಸಾದ ನಿರೂಪಣೆ, ಏಕಾಕ್ಷರಿ, ದ್ವ್ಯಕ್ಷರಿ ಮುಂತಾದ ಶಬ್ದಾಲಂಕಾರಗಳ ಪ್ರಯೋಗ, ನಗರ, ಪರ್ವತ, ಇತ್ಯಾದಿಗಳ ವರ್ಣನೆ ಎರಡೂ ಕಾವ್ಯಗಳಲ್ಲಿ ಸಮಾನಾಂತರವಾಗಿ ಕಂಡುಬರುವ ಅಂಶಗಳು.

श्रियः पतिः श्रीमति शासितुं जगज्जगन्निवासो वसुदेव सद्मनि ।

वसंददर्शावतरंतमंबराद्धिरण्यगर्भांगभुवं मुनिं हरिः ॥[14]

ಎಂಬ ಶ್ಲೋಕದಿಂದ ಕವಿಯು ತನ್ನ ಕಾವ್ಯಾರಂಭವನ್ನು ಮಾಡಿದ್ದಾನೆ. ಲಕ್ಷ್ಮೀಪತಿಯಾದ, ಸಮಸ್ತ ಜಗತ್ತಿಗೆ ಆಧಾರನಾದ ನಾರಾಯಣನು ಜಗತ್ತಿನ ನಿಯಂತ್ರಣಕ್ಕಾಗಿ ವಸುದೇವನ ಮನೆಯಲ್ಲಿ ವಾಸಿಸುತ್ತಿರುವ ಸಮಯದಲ್ಲಿ ಒಂದು ದಿನ ಹಿರಣ್ಯಗರ್ಭನ ಮಗನಾದ ನಾರದ ಮಹರ್ಷಿಗಳು ಆಕಾಶದಿಂದ ಕೆಳಗೆ ಇಳಿಯುತ್ತಿರುವುದನ್ನು ನೋಡುತ್ತಾನೆ. ಆಗಮಿಸಿದ ನಾರದರನ್ನು ಅರ್ಘ್ಯ-ಪಾದ್ಯಾದಿಗಳಿಂದ ಚರ್ಚಿಸಿ, ತನ್ನ ಮಾತುಗಳಿಂದ ಸಂತುಷ್ಟಿಗೊಳಿಸಿ ಬಂದ ಕಾರಣವನ್ನು ಕೇಳುತ್ತಾನೆ. ಆಗ ನಾರದರು ಕೃಷ್ಣನಿಗೆ ಅವನ ಅವತಾರಗಳನ್ನು, ಆಯಾಯ ಅವತಾರಗಳಲ್ಲಿ ನಾಶಹೊಂದಿದ ರಾಕ್ಷಸರುಗಳನ್ನು ನೆನಪಿಸಿ ಈ ಅವತಾರದಲ್ಲಿ ರಾವಣನ ಅವತಾರವಾಗಿರುವ ಶಿಶುಪಾಲನನ್ನು ಸಂಹರಿಸಬೇಕೆಂಬ ಇಂದ್ರನ ಸಂದೇಶವನ್ನು ತಿಳಿಸುತ್ತಾರೆ. ಬಲರಾಮನು ಕೃಷ್ಣನ ಸಂಶಯವನ್ನು ಪರಿಹಾರ ಮಾಡಲು ಪ್ರಯತ್ನಿಸುತ್ತಾನೆ. ಮಾತನ್ನಾರಂಭಿಸಿದ ಬಲರಾಮನು ರಾಜನ ಕೆಲವು ಧರ್ಮಗಳನ್ನು ಹೇಳುತ್ತಾನೆ.

षड्गुणाः शक्तयस्तिस्रः सिद्धयश्चोदयास्त्रयः ।

ग्रंथानधीत्य व्याकर्तुमिति दुर्मेधसोप्यलं ॥[15]

ಬುದ್ಧಿವಂತರಲ್ಲದವರೂ ಕೂಡ ನೀತಿಶಾಸ್ತ್ರಾದಿಗಳನ್ನು ಅಧ್ಯಯನ ಮಾಡಿ ವ್ಯಾಖ್ಯಾನ ಮಾಡಬಹುದಾದ ರಾಜನ ಕೆಲವು ಗುಣಗಳು, ಶಕ್ತಿಗಳು, ಸಿದ್ಧಿಗಳು, ಉದಯಗಳಿವೆ. ಸಂಧಿ, ವಿಗ್ರಹ, ಯಾನ, ಆಸನ, ಸಂಶ್ರಯ, ಮತ್ತು ದ್ವೈಧೀಭಾವ ಇವು ಆರು ರಾಜನ ಗುಣಗಳು. ಹಣ ಇತ್ಯಾದಿಗಳನ್ನು ನೀಡಿ

14. ಶಿ.ವ.1-1
15. ಶಿ.ವ. 1-26

ಇತರರನ್ನು ತಮ್ಮತ್ತ ಸೆಳೆದುಕೊಳ್ಳುವುದು ಸಂಧಿ. ಇಬ್ಬರಲ್ಲಿ ದ್ವೇಷವನ್ನು ಉಂಟುಮಾಡುವುದು ವಿಗ್ರಹ. ಪ್ರಯಾಣ ಇತ್ಯಾದಿಗಳು ಯಾನವಾಗಿರುತ್ತವೆ. ರಾಜನಾದವನಿಗೆ ತನ್ನ ಉನ್ನತಿ ಅಂದರೆ ತಾನು ಎಲ್ಲರಿಗಂತಲು ಶ್ರೇಷ್ಠನಾಗಿರುವುದು ಹಾಗೂ ತನ್ನ ವಿರುದ್ಧ ಇರುವ ಶತ್ರುಗಳ ಸಮೂಲ ನಾಶ ಈ ಎರಡು ಸದಾ ಲಕ್ಷ್ಯದಲ್ಲಿರಬೇಕು. ರಾಜನಿಗೆ ಸಂಬಂಧಿಸಿದ ನೀತಿಶಾಸ್ತ್ರಗಳಲ್ಲೂ ಇವೆರಡಕ್ಕೆ ಅತಿರಿಕ್ತವಾದುದು ಇಲ್ಲ.ಆದ್ದರಿಂದ ಚತುರನಾದ ರಾಜನು ತನ್ನ ವಾಕ್ಚಾತುರ್ಯವನ್ನು ಮೆರೆಯಬೇಕು.

तृप्तियोगः परेणापि महिम्ना न महात्मनां ।

पूर्णचंद्रोदयाकांक्षी दृष्टांतोत्र महार्णवः ॥[16]

"ಅಸಂತುಷ್ಟೋ ದ್ವಿಜೋ ನಷ್ಟ: ಸಂತುಷ್ಟಶ್ಚ ಮಹೀಭುಜ:" ಎಂಬ ನ್ಯಾಯವನ್ನು ಪುನ: ಮಾಘನು ಬಲರಾಮನ ಮಾತಿನಲ್ಲಿ ಉದ್ಧರಿಸಿದ್ದಾನೆ. ದೊರಕಿರುವ ದಾನ–ದಕ್ಷಿಣಾದಿಗಳಿಂದ ಬ್ರಾಹ್ಮಣನು ಸಂತುಷ್ಟನಾಗದಿದ್ದರೆ ಅದು ಆತನಿಗೆ ನರಕವನ್ನು ತಂದೊಡ್ಡುತ್ತದೆ. ಹಾಗೆ ರಾಜನಾದವನು ತನಗೆ ದೊರಕಿರುವ ರಾಜ್ಯ–ಧನ–ಕನಕಾದಿಗಳಿಂದ ಸಂತುಷ್ಟಿಯನ್ನು ಹೊಂದಬಾರದು. ಆದ್ದರಿಂದ ಅತ್ಯಂತ ಬುದ್ಧಿವಂತನಾದ ರಾಜನು ರಾಜ್ಯ ವಿಸ್ತರಣೆಯಲ್ಲಿ, ತನ್ನ ಕೋಶವೃದ್ಧಿಯಲ್ಲಿ ಉದಾಸೀನತೆಯನ್ನು ತೋರಿಸದೇ ಸದಾ ಉತ್ಸಾಹಶಾಲಿಯಾಗಿ ತನ್ನ ಪರಾಕ್ರಮದಿಂದ ಸದಾ ದಿಗ್ವಿಜಯದಲ್ಲಿ ತೊಡಗಿರಬೇಕು. ಉದಾಹರಣೆಗೆ ಎಲ್ಲಾ ವಿಧದಿಂದಲೂ ಪರಿಪೂರ್ಣವಾದ ಸಮುದ್ರವೂ ಕೂಡ ಚಂದ್ರೋದಯದ ನಿರೀಕ್ಷೆಯನ್ನು ಮಾಡುತ್ತದೆ. ಏಕೆಂದರೆ ಚಂದ್ರೋದಯದಿಂದ ಮಾತ್ರ ಸಮುದ್ರದಲ್ಲಿ ಸಮೃದ್ಧಿಯುಂಟಾಗುತ್ತದೆ.

संपदा सुस्थिरं मन्यो भवति स्वल्पयापि यः ।

कृतकृत्यो विधिर्मन्ये न वर्धयति तस्य तां ॥[17]

ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ ಎಂಬ ಸುಭಾಷಿತದಂತೆ ಪರಿಶ್ರಮ ಪಡುತ್ತಿರುವ ಪುರುಷನನ್ನು ಮಾತ್ರ ಲಕ್ಷ್ಮೀಯು ಸೇರುತ್ತಾಳೆ. ಮೂರ್ಖರು ಮಾತ್ರ ದೇವರು ಎಲ್ಲವನ್ನು ಕೊಡುತ್ತಾನೆ ಎಂದು ನಂಬುತ್ತಾರೆ. ಆದ್ದರಿಂದ ರಾಜನಾದವನು ತನಗಿರುವ ಸ್ವಲ್ಪ ಸಂಪತ್ತಿನಿಂದ ತೃಪ್ತಿಯನ್ನು ಹೊಂದಬಾರದು. ಹಾಗೆ ಅದರಲ್ಲೇ ಸಂತೃಪ್ತಿ ಹೊಂದಿರುವವನ ಸಂಪತ್ತನ್ನು ಬ್ರಹ್ಮನು ಯಾವುದೇ ಕಾರಣಕ್ಕೂ ವೃದ್ಧಿ ಮಾಡುವುದಿಲ್ಲ. ಪರಿಶ್ರಮವನ್ನು ಪಡುವವನ ಸಂಪತ್ತನ್ನು ಮಾತ್ರ ವಿಧಾತನು ವೃದ್ಧಿಸುತ್ತಾನೆ.

ರಾಜನಾದವನು ಸ್ವಾಭಿಮಾನಿಯಾಗಿರಬೇಕು. ಸದಾಕಾಲ ಶತ್ರುಗಳ ಭಯದಲ್ಲಿರುವವನಿಗೆ ಸುಖವೂ ಇರುವುದಿಲ್ಲ. ಅವನಿಂದ ಸರಿಯಾದ ರೀತಿಯಲ್ಲಿ ರಾಜ್ಯಭಾರವೂ ನಡೆಯುವುದಿಲ್ಲ. ಆದ್ದರಿಂದ

16. ಶಿ.ವ. 2–31
17. ಶಿ.ವ. 2–32

ಸ್ವಾಭಿಮಾನಿಯಾದ ರಾಜನು ತನ್ನ ಶತ್ರುಗಳ ನಾಶವನ್ನು ಮಾಡಬೇಕು. ಹೇಗೆ ಸೂರ್ಯನು ಉದಯಿಸುವಾಗ ಗಾಢವಾಗಿರುವ ಕತ್ತಲನ್ನು ಸಂಪೂರ್ಣ ನಾಶಮಾಡುತ್ತಾನೋ ಹಾಗೇ ರಾಜನು ಎಲ್ಲಾ ಶತ್ರುಗಳನ್ನು ಸದೆ ಬಡಿದು ಉನ್ನತಿಗೆ ಏರಬೇಕು.

अधिगम्य च रंध्रमंतरा जनयन्मंडलभेदमन्यतः ।

खनति क्षतसंहति क्षणादपि मूलानि महांति कस्यचित् ॥[18]

ಈ ಶ್ಲೋಕದಲ್ಲಿ ಒಬ್ಬ ಸಮರ್ಥ ರಾಜನ ರಾಜನೀತಿಯು ಹೇಗಿರಬೇಕೆಂದು ನಿರೂಪಿಸಲ್ಪಟ್ಟಿದೆ. ರಾಜನು ತನ್ನ ಶತ್ರುವನ್ನು ನಾಶಮಾಡಬೇಕಾದರೆ ಆ ಶತ್ರುವಿನಲ್ಲಿರುವ ದೋಷವನ್ನು ಮೊದಲು ಹುಡುಕಬೇಕಾಗುತ್ತದೆ. ಸಾಮ-ದಾನ-ಭೇದ –ದಂಡಗಳೆಂಬ ನಾಲ್ಕು ಉಪಾಯಗಳಲ್ಲಿ ಭೇದೋಪಾಯವು ಸಾಮಾನ್ಯವಾಗಿ ಉತ್ತಮವಾಗಿ ಕೆಲಸವನ್ನು ಮಾಡುತ್ತದೆ. ಹೇಗೆ ನದಿಯ ಭೀಕರ ಪ್ರವಾಹವು ನದಿಯ ತಟದಲ್ಲಿರುವ ಸಾಲು ಮರಗಳ ಮೇಲೆ ಹರಿದು ಅವುಗಳನ್ನು ನೆಲಸಮ ಮಾಡುವುದರ ಜೊತೆಗೆ ಮರವನ್ನು ಭದ್ರವಾಗಿ ಹಿಡಿದಿಟ್ಟು ಕೊಂಡಿದ್ದ ಭೂಮಿಯನ್ನೂ ಭೇಧಿಸುತ್ತದೆ. ಅದೇ ಪ್ರಕಾರ ರಾಜನು ಶತ್ರುಗಳ ಮಂತ್ರಿಮಂಡಲದಲ್ಲಿ ಭೇದವನ್ನು ಉಂಟುಮಾಡಿ, ಅವರನ್ನು ಬೇರೆ ಬೇರೆ ಮಾಡಬೇಕು. ಅನಂತರ ಅವರಲ್ಲಿರುವ ಏಕತೆಯನ್ನು ಭಂಗಗೊಳಿಸಿ , ಶತ್ರುರಾಷ್ಟ್ರದ ಮುಖ್ಯ-ಮುಖ್ಯ ಅಧಿಕಾರಿಗಳನ್ನು ದೂರ-ದೂರ ಮಾಡಬೇಕು. ಆಗ ಶತ್ರು ರಾಜನ ರಾಜ್ಯದಲ್ಲಿ ಅಂತ:ಕಲಹಾದಿಗಳು ಉದ್ಭವಿಸಿ ರಾಜನು ಅನಿವಾರ್ಯವಾಗಿ ಶಿಥಿಲನಾಗುತ್ತಾನೆ.

ರಾಜನಾದವನ ಆಜ್ಞೆ ಹೇಗಿರಬೇಕೆಂದರೆ –

परितः प्रमिताक्षरापि सर्वं विषयं व्याप्तवती गता प्रतिष्ठा ।

न खलु प्रतिहन्यते कुतश्चित्परिभाषेव गरीयसी यदाज्ना ॥ [19]

ವ್ಯಾಕರಣ ಶಾಸ್ತ್ರದಲ್ಲಿ ಪಾಣಿನಿ ಮಹರ್ಷಿಗಳು **"अल्पाक्षरमसंदिग्धं सारवद्विश्वतोमुखं ।अस्तोबमनवद्यं च सूत्रं सूत्रविदो विदुः॥**[20] ಎಂಬ ಉಕ್ತಿಯಂತೆ ಅಲ್ಪಾಕ್ಷರಗಳನ್ನು ಬಳಸಿ ವೃದ್ಧಿ, ಗುಣ ಮೊದಲಾದ ಪಾರಿಭಾಷಿಕ ಸಂಜ್ಞೆಗಳನ್ನು ಬಳಸಿಕೊಂಡು ಬಹಳ ಜಾಣ್ಮೆಯಿಂದ **"ಇಕೋಗುಣವೃದ್ಧಿ:"** ಮೊದಲಾದ ಸೂತ್ರಗಳನ್ನು ರಚಿಸಿದ್ದಾರೆ. ಈ ಸೂತ್ರಗಳು ಕಡಿಮೆ ಶಬ್ದಗಳನ್ನು ಹೊಂದಿದ್ದರೂ ಬಹಳ ಅರ್ಥವನ್ನು ಹೊದಿರುತ್ತವೆ. ಅದೇ ಪ್ರಕಾರ ರಾಜನು ಸ್ವಲ್ಪಾಕ್ಷರದಲ್ಲೇ ಆಜ್ಞೆ ಮಾಡಿದರೂ ಅದು ಬಹಳ ಪರಿಣಾಮಕಾರಿಯಾಗಿರಬೇಕು.

---

18. ಶಿ.ವ. 16–62
19. ಶಿ.ವ. 16–80
20. ಭಾ.ಶಾ.ಸಾ.ಚ

ಮಹಾಕಾವ್ಯದಲ್ಲಿ ಹದಿನೇಳನೇ ಸರ್ಗದಲ್ಲಿ ಯುಧಿಷ್ಠಿರನಿಂದ ರಾಜಸೂಯ-ಯಾಗಕ್ಕಾಗಿ ರಚಿಸಲ್ಪಟ್ಟ ಸಭೆಯಲ್ಲಿ ಕೋಲಾಹಲವುಂಟಾಗುತ್ತದೆ. ಕೋಪಗೊಂಡ ಕೃಷ್ಣನು ಸೇನೆಗೆ ಸಿದ್ಧವಾಗಲು ಆದೇಶ ನೀಡುತ್ತಾನೆ. ಸೇನೆಯು ಯುದ್ಧಭೂಮಿಯತ್ತ ತೆರಳುತ್ತದೆ. ನಡೆದ ಘೋರಯುದ್ಧದಲ್ಲಿ ಶ್ರೀಕೃಷ್ಣನು ಶಿಶುಪಾಲನನ್ನು ತನ್ನ ಸುದರ್ಶನದಿಂದ ಕೊಲ್ಲುತ್ತಾನೆ.

ಹೀಗೆ ಸಂಪೂರ್ಣ ಶಿಶುಪಾಲವಧವು ರಾಜಕೇಂದ್ರಿತ ಮಹಾಕಾವ್ಯವಾದುದರಿಂದ ಆರಂಭದಿಂದ ಅಂತ್ಯದವರೆಗೂ ರಾಜಧರ್ಮದ ಉಲ್ಲೇಖವನ್ನು ಕಾಣಬಹುದು.

ಅಧ್ಯಾಯ – ೬
ನೈಷಧೀಯಚರಿತದಲ್ಲಿ ರಾಜಧರ್ಮ

ನಳ-ದಮಯಂತಿಯರ ಕಥೆ ಭಾರತೀಯರ ಪ್ರಸಿದ್ಧವಾದ ಕಥೆಯಾಗಿದೆ. ಮಹಾಭಾರತದ ವನಪರ್ವದಲ್ಲಿ ನಲೋಪಾಖ್ಯಾನವು ಇದೆ. ನಳೋಪಾಖ್ಯಾನದ ಉದ್ದೇಶವೇನೆಂದರೆ ಧೈರ್ಯವನ್ನು ತೆಗೆದುಕೊಳ್ಳಲು ಪ್ರೇರಣೆ ನೀಡುವುದಾಗಿದೆ. ಯಾರು ಅತ್ಯಂತ ಕಷ್ಟದ ಸಮಯದಲ್ಲೂ ಧೈರ್ಯದಿಂದಿದ್ದು ಬಂದಿರುವ ಕಷ್ಟವನ್ನು ಪರಿಹರಿಸಿಕೊಳ್ಳಲು ಕಾರ್ಯವೆಸಗುತ್ತಾರೋ ಅವರು ಮಹಾತ್ಮರೆನಿಸಿಕೊಳ್ಳುತ್ತಾರೆ. ನಳಮಹಾರಾಜನೂ ಕೂಡಾ ಅನೇಕ ವಿಪತ್ತುಗಳನ್ನು ದಾಟಿ ಅಂತ್ಯದಲ್ಲಿ ಪುನ: ರಾಜ್ಯವನ್ನು ಪಡೆಯುತ್ತಾನೆ. ಧೃತರಾಷ್ಟ್ರ ಪುತ್ರನಾದ ದುರ್ಯೋಧನನು ಕಪಟದ್ಯೂತವನ್ನಾಡಿ ಪಾಂಡವರ ಸಕಲ ವಸ್ತುಗಳನ್ನೂ ಅಪಹರಿಸಿ ಅವರನ್ನು ವನವಾಸ ಹಾಗೂ ಅಜ್ಞಾತವಾಸಕ್ಕೆ ಕಳುಹಿಸುತ್ತಾನೆ. ಪಾಂಡವರಾದರೋ ತಮ್ಮ ಅದೃಷ್ಟವನ್ನು ಹಳಿಯುತ್ತಾ ವನವಾಸವನ್ನು ಅನುಭವಿಸುತ್ತಿರುತ್ತಾರೆ. ಅರ್ಜುನನಾದರೋ ದೈವೀ ಸಹಾಯಕ್ಕಾಗಿ ಹಾಗೂ ದಿವ್ಯಾಸ್ತ್ರಗಳ ಪ್ರಾಪ್ತಿಗಾಗಿ ತಪಸ್ಸನ್ನಾಚರಿಸಲು ಹೋಗುತ್ತಾನೆ. ಮುಂದೇನು ಮಾಡಬೇಕೆಂದು ತಿಳಿಯದೇ ಚಿಂತಾಕ್ರಾಂತನಾಗಿ ದು:ಖದಲ್ಲಿರುವ ಯುಧಿಷ್ಠಿರನ ಬಳಿ ಬೃಹದಶ್ವ ಮಹರ್ಷಿಗಳು ಆಗಮಿಸುತ್ತಾರೆ. ಬೃಹದಶ್ವರು ದು:ಖದಲ್ಲಿರುವ ಧರ್ಮರಾಜನನ್ನು ನೋಡಿ ಅವನಲ್ಲಿ ಧೈರ್ಯವನ್ನೂ, ಪ್ರೋತ್ಸಾಹವನ್ನು ತುಂಬಲು ನಲೋಪಾಖ್ಯಾನವನ್ನು ಹೇಳುತ್ತಾರೆ.

आसीद्राजा नलो नाम वीरसेनसुतो बली ।

उपपन्नो गुणैरिष्टै रूपवानश्वकोविदः ॥[21]

ಹಿಂದೆ ನಿಷಧ ದೇಶದಲ್ಲಿ ವೀರಸೇನನ ಮಗನಾದ, ಅತ್ಯಂತ ಬಲಶಾಲಿಯಾದ, ಸಕಲ ಗುಣಸಂಪನ್ನನಾದ, ರೂಪವಂತನಾದ, ಅಶ್ವಪರೀಕ್ಷೆಯಲ್ಲಿ ನಿಷ್ಣಾತನಾದ ನಳ ಎಂಬ ಹೆಸರಿನ ರಾಜನಿದ್ದನು ಎಂಬುದಾಗಿ ಬೃಹದಶ್ವರು ನಳಚರಿತ್ರೆಯನ್ನು ಆರಂಭಿಸುತ್ತಾರೆ. ಆ ನಳನಿಗೂ ವಿದರ್ಭದ ರಾಜಕುವರಿಯಾದ ದಮಯಂತಿಗೂ ಪರಸ್ಪರ ಆಕರ್ಷಣೆ ಉಂಟಾಗುತ್ತದೆ. ಇವರೀರ್ವರ ಪ್ರಣಯಕ್ಕೆ ನಳನಿಂದ ಪ್ರಾಣದಾನವನ್ನು

21. ಮ.ವ.ಆ

ಪಡೆದ ಒಂದು ಹಂಸವು ದೌತ್ಯವನ್ನು ಮಾಡುತ್ತದೆ. ಹಂಸನಿಂದ ಕಳುಹಿಸಲ್ಪಟ್ಟ ಸಂದೇಶಕ್ಕೆ ದಮಯಂತಿಯು ಸಕಾರಾತ್ಮಕವಾದ ಉತ್ತರವನ್ನು ನೀಡುತ್ತಾಳೆ. ಅನಂತರ ವಿದರ್ಭರಾಜನು ದಮಯಂತಿಯ ಸ್ವಯಂವರವನ್ನು ಏರ್ಪಡಿಸುತ್ತಾನೆ. ಆ ಸ್ವಯಂವರಕ್ಕೆ ಇಂದ್ರ, ವರುಣ ಮೊದಲಾದ ದೇವತೆಗಳೆಲ್ಲಾ ಆಗಮಿಸುತ್ತಾರೆ. ಅವರೆಲ್ಲರಿಗೂ ದಮಯಂತಿಯನ್ನು ಮದುವೆಯಾಗಬೇಕೆಂಬ ಆಸೆ ಇರುತ್ತದೆ. ಆದರೆ ಮೊದಲೇ ಪ್ರೇಮಾಂಕುರವಾಗಿದ್ದರಿಂದ ಸ್ವಯಂವರದಲ್ಲಿ ದಮಯಂತಿಯು ನಳನನ್ನು ಪತಿಯನ್ನಾಗಿ ಸ್ವೀಕರಿಸುತ್ತಾಳೆ. ಇದರಿಂದ ಕಲಿಯು ಅತ್ಯಂತ ಕ್ರೋಧಿತನಾಗುತ್ತಾನೆ. ಅನಂತರ ಕಲಿಯಿಂದ ಪ್ರೇರೇಪಿಸಲ್ಪಟ್ಟ ಪುಷ್ಕರನೆಂಬುವವನು ದ್ಯೂತದಲ್ಲಿ ನಳನನ್ನು ಸೋಲಿಸುತ್ತಾನೆ. ಪತ್ನಿಯ ಜೊತೆಗೆ ವನವಾಸಕ್ಕೆ ಹೋದ ನಳನು ಸಂಕಷ್ಟದ ಸಮಯದಲ್ಲಿ ತನ್ನ ಕಾರಣದಿಂದ ಪತ್ನಿಯಾದ ದಮಯಂತಿಯು ಕಷ್ಟವನ್ನು ಅನುಭವಿಸುವುದು ಸರಿಯಲ್ಲ ಎಂದೆಣಿಸಿ ಮಾರ್ಗಮಧ್ಯದಲ್ಲಿ ಅವಳನ್ನು ತ್ಯಜಿಸುತ್ತಾನೆ. ಅನಂತರ ಕಷ್ಟದಲ್ಲಿರುವ ಕಾರ್ಕೋಟಕನನ್ನು ರಕ್ಷಿಸಲು ಹೋದ ನಳನು ತನ್ನ ಸಹಜ ಸೌಂದರ್ಯವನ್ನು ಕಳೆದುಕೊಂಡು ಕುರೂಪಿಯಾಗುತ್ತಾನೆ. ಅನಂತರ ಅಯೋಧ್ಯೆಯನ್ನು ಸೇರಿದ ನಳನು ಅಯೋಧ್ಯಾಧಿಪತಿಯ ರಾಜಸಾರಥಿಯಾಗಿರುತ್ತಾನೆ. ನಳನನ್ನು ಪುನಃ ಪಡೆಯಲು ದಮಯಂತಿಯ ಆಶಯದಂತೆ ವಿದರ್ಭರಾಜನುಇನ್ನೊಮ್ಮೆ ದಮಯಂತಿಯ ಸ್ವಯಂವರವನ್ನೇರ್ಪಡಿಸುತ್ತಾನೆ. ಆಗ ಅಯೋಧ್ಯಾಧಿಪತಿಯ ಜೊತೆ ಆಗಮಿಸಿದನಳನನ್ನು ದಮಯಂತಿಯು ಗುರುತಿಸುತ್ತಾಳೆ, ಮತ್ತು ಅವರೀರ್ವರ ಪುನರ್ಮಿಲನವಾಗುತ್ತದೆ.

ಕವಿಗಳಲ್ಲಿ ಶ್ರೇಷ್ಠನೆನಿಸಿಕೊಂಡ ಶ್ರೀಹರ್ಷನು ಮಹಾಭಾರತದಲ್ಲಿ ಹೇಳಿರುವ ನಲೋಪಾಖ್ಯಾನದ ಕೇವಲ ಆರು ಅಧ್ಯಾಯಗಳನ್ನಾಧರಿಸಿ ನೈಷಧ ಚರಿತವೆಂಬ ಮಹಾಕಾವ್ಯವನ್ನೇ ರಚಿಸಿದ್ದಾನೆ.

ನೈಷಧೀಯಚರಿತದ ಆರಂಭದ ಶ್ಲೋಕದಲ್ಲೇ ಶ್ರೀಹರ್ಷನು ಕಥಾನಾಯಕನಾದ ನಳನನ್ನು ಹೊಗಳುತ್ತಾನೆ.

निपीय यस्य क्षितिरक्षिणः कथां तथाद्रियंते न बुधास्सुधामपि ।

नलस्सितच्छत्रित कीर्तिमंडलस्य राशिरासीन्महसां महोज्वलः ॥[22]

ಮಹಾರಾಜನಾದ ಪೃಥಿವೀಪಾಲಕನಾದ ನಳನ ಕಥೆಯನ್ನು ಕೇಳಿ ದೇವತೆಗಳು ಅಮೃತವನ್ನೂ ಇಷ್ಟಪಡುವುದಿಲ್ಲ. ಅಂತಹ ಭವ್ಯವಾದ ಕೀರ್ತಿಯಿಂದ ನಳನು ಬೆಳಗ್ಗುತ್ತಿದ್ದನು. ತನ್ನ ರಾಜಧರ್ಮದಿಂದ ದೇವತೆಗಳಿಗೂ ಇಷ್ಟದವನಾಗಿದ್ದನು.

ರಾಜನಿಗಿರಬೇಕಾದ ಎಲ್ಲಾ ಗುಣಗಳನ್ನು ಹೊಂದಿದ್ದ ನಳನು ಒಬ್ಬ ಅದ್ಭುತ ಹಾಗೂ ಅನುಪಮ ರಾಜನಾಗಿದ್ದನು. ಒಬ್ಬ ರಾಜನಾದವನು ರಾಜ್ಯಭಾರವನ್ನು ವಹಿಸಿಕೊಳ್ಳುವುದಕ್ಕಿಂತಲೂ ಪೂರ್ವದಲ್ಲಿ ಸಕಲವಿಧವಾದ ವಿದ್ಯೆಗಳಲ್ಲಿ ಪಾರಂಗತನಾಗಿರಬೇಕು.

---

22. ನೈ.ಚ.ಸ.1–1

ಉಪಸಂಹಾರ :

ಹೀಗೆ ಸಂಸ್ಕೃತ ಮಹಾಕಾವ್ಯಸಹಿತ್ಯಗಳು ಭಾರತೀಯ ಸಮಾಜದ ಭವ್ಯ ವಿಚಾರಗಳ ಕನ್ನಡಿಯಾಗಿವೆ. ಸಮಾಜವು ಯಾವ ಪ್ರಕಾರದಲ್ಲಿ ಇರುತ್ತದೆಯೋ ಅದೇ ಪ್ರಕಾರವು ಕಾವ್ಯಗಳಲ್ಲಿ ಪ್ರತಿಬಿಂಬಿತವಾಗುತ್ತವೆ. ಕಾವ್ಯಗಳು ಸಮಾಜದ ಭಾವನೆಗಳನ್ನು ಮತ್ತು ಸಾಮಾಜಿಕ-ರಾಜಕೀಯ –ಆರ್ಥಿಕ ವಿಚಾರಗಳಶುದ್ಧವಾದ ಅಭಿವ್ಯಕ್ತ್ಯಿಯಾಗಿರುವುದರಿಂದ ಈ ಎಲ್ಲಾ ಅಂಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಗುರುತರ ಜವಾಬ್ದಾರಿಯನ್ನು ಕಾವ್ಯಗಳು ಹೊಂದಿರುತ್ತವೆ. ಭಾರತೀಯ ಸಂಸ್ಕೃತಿಯು ಮುಖ್ಯವಾಗಿ ಗೃಹಸ್ಥಾಶ್ರಮ ಧರ್ಮದ ಮೇಲೆ ನಿಂತಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಉಳಿದ ಬ್ರಹ್ಮಚರ್ಯ-ವಾನಪ್ರಸ್ಥ-ಸನ್ಯಾಸಾಶ್ರಮಗಳಿಗೆ ಗೃಹಸ್ಥಾಶ್ರಮವು ಆಧಾರಸ್ಥಂಭವಾಗಿದೆ. ಆದ್ದರಿಂದ ಸಂಸ್ಕೃತ ಮಹಾಕಾವ್ಯಗಳು ಗೃಹಸ್ಥಧರ್ಮದ ಚಿತ್ರಣವನ್ನು ಸಂಪೂರ್ಣವಾಗಿ ತೆರೆದಿಟ್ಟಿವೆ.

ರಾಮಾಯಣದಿಂದ ಆರಂಭವಾದ ಈ ಕಾವ್ಯಪರಂಪರೆಯು ಹೇಗೆ ಭಾರತೀಯ ಸಂಸ್ಕೃತಿಯನ್ನು ಅನುಪಮಗೊಳಿಸಿತೋ ಹಾಗೆಯೇ ಮುಂದೆ ಬಂದ ಕವಿಗಳೆಲ್ಲರೂ ಅದನ್ನು ಮುಂದುವರಿಸಿಕೊಂಡು ಹೋದರು. ಸಂಸ್ಕೃತ ಕವಿಗಳೆಂದರೆ ರಾಜಮಹಾರಾಜರುಗಳ ಆಸ್ಥಾನದಲ್ಲಿಕುಳಿತು ರಾಜನ ಆದೇಶಂತೆ ಅವರ ಮನಸ್ಸನ್ನು ಮುದಗೊಳಿಸುವ ಕೆಲಸವನ್ನು ಮಾತ್ರ ಮಾಡದೇ ಆ ಕಾಲದಲ್ಲಿ ರಾಜ ಮಹಾರಾಜರುಗಳ ಇತಿಹಾಸವನ್ನು ತಮ್ಮ ಕಾವ್ಯದಲ್ಲಿ ತೋರಿಸಿದರು. ಅವರ ಜೀವನಪದ್ಧತಿ, ಆಚಾರ ವಿಚಾರಗಳು, ಅವರ ಧರ್ಮಗಳು ಈ ಎಲ್ಲಾ ವಿಷಯಗಳನ್ನು ತಮ್ಮ ಕಾವ್ಯದಲ್ಲಿ ಪ್ರದರ್ಶಿಸಿದ್ದಾರೆ. ಕಾಲಿದಾಸನ ರಘುವಂಶವು ಸಂಪೂರ್ಣ ರಾಜರುಗಳ ಚರಿತ್ರೆಯೇ ಆಗಿದ್ದು ಕಾಲಿದಾಸನು ರಘು-ದಿಲೀಪ-ಅಜ-ರಾಮ ಮೊದಲಾದ ಎಲ್ಲಾ ರಾಜರುಗಳಿಗೆ ಕಿರೀಟಪ್ರಾಯರಾದ ಉತ್ತಮ ರಾಜರುಗಳ ಚರಿತ್ರೆಯ ಜೊತೆಗೆ ರಾಜಧರ್ಮವನ್ನು ಸಂಪೂರ್ಣವಾಗಿ ಧಿಕ್ಕರಿಸಿದ ಅಗ್ನಿವರ್ಣನನ್ನೂ ತೋರಿಸಿದ್ದಾನೆ. ಹಾಗೆ ಕುಮಾರ ಸಂಭವವೂ ಕೂಡ ಹಿಮ್.ವಂತನಂತಹ ರಾಜನು ಜಗದೊಡೆಯನಾದ ಶಿವನನ್ನು ಅಳಿಯನನ್ನಾಗಿ ಪಡೆಯುವ ಕಥಾನಕವಾಗಿದೆ. ಭಾರವಿಯ ಕಿರಾತಾರ್ಜುನೀಯವಂತೂ ರಾಜಧರ್ಮದ ನಿಧಿಯಾಗಿದೆ. ಅಲ್ಲಿ ದುಷ್ಟನಾದ ದುರ್ಯೋಧನನು ಕೂಡ ಕಾಲವಶದಿಂದ ಉತ್ತಮ ರಾಜನಾಗುವ ಕೆಲಸದಲ್ಲಿ ತೊಡಗುವುದೂ, ನ್ಯಾಯವಾಗಿ ಬರಬೇಕಾದ ರಾಜ್ಯವನ್ನು ಕಳೆದುಕೊಂಡು ಅರಣ್ಯವಾಸಿಯಾದ ಅಜಾತಶತ್ರುವೆನಿಸಿಕೊಂಡ ಧರ್ಮರಾಜನ ಮನೋಭಾವನೆ ಇತ್ಯಾದಿ ವಿಷಯಗಳು ಮನೋಜ್ಞವಾಗಿದೆ. ಮಾಘನ ಮಹಾಕಾವ್ಯದಲ್ಲಿ ಪರಸ್ಪರ ವಿರೋಧ ಗುಣಗಳುಳ್ಳ ಇಬ್ಬರು ರಾಜರುಗಳ ಚಿತ್ರಣವನ್ನು ಕವಿಯು ಮಾಡಿದ್ದಾನೆ. ಶ್ರೀಕೃಷ್ಣ- ಧರ್ಮರಾಜರುಗಳಂತಹ ಸಕಲ ಗುಣಸಂಪನ್ನ ರಾಜರುಗಳನ್ನು ಪರಿಚಯಿಸುತ್ತಾ ಶಿಶುಪಾಲನಂತಹ ಶಕ್ತಿವಂತನಾದ ರಾಜನೂ ಕೂಡ ರಾಜಧರ್ಮವನ್ನು ಪಾಲಿಸದೇ ಕೃಷ್ಣನಿಂದ ಹತನಾಗುವ ಕಥಾನಕವು ಅಮೋಘವಾಗಿದೆ. ನೈಷಧವಂತೂ

ಸಂಪೂರ್ಣವಾಗಿ ನಳಮಹಾರಾಜನ ಕಥೆಯಾಗಿದೆ. ನಳನಂತಹ ರಾಜನು ಹಿಂದೂ ಹುಟ್ಟಿಲ್ಲ, ಮುಂದೆಯೂ ಹುಟ್ಟಲಾರನೆಂಬಷ್ಟು ಅದ್ಭುತವಾಗಿ ಕವಿಯು ಚಿತ್ರಿಸಿದ್ದಾನೆ. ರಾಜಮಹಾರಾಜರುಗಳು ನೀತಿಶಾಸ್ತ್ರ-ಧರ್ಮಶಾಸ್ತ್ರಾದಿಗಳನ್ನು ಓದದೇ ಕೇವಲ ನಳಮಹಾರಜನ ಚರಿತ್ರೆಯನ್ನು ಕೇಳಿದರೆ ಅವೆಲ್ಲವೂ ದೊರಕುವ ರೀತಿಯಲ್ಲಿ ಶ್ರೀಹರ್ಷನು ನಳಮಹಾರಾಜನನ್ನು ಚಿತ್ರಿಸಿದ್ದಾನೆ.

ಒಟ್ಟಿನಲ್ಲಿ ಪಂಚಮಹಾಕಾವ್ಯದಲ್ಲಿ ವರ್ಣಿತವಾದ ರಾಜಧರ್ಮವುಇಂದಿಗೂ ಪ್ರಸ್ತುತವಾಗಿವೆ. ಶ್ರೀರಾಮ–ಹಿಮವಂತ–ಯುಧಿಷ್ಠಿರ –ಶ್ರೀಕೃಷ್ಣ–ನಳ ಮಹಾರಾಜರೇ ಮೊದಲಾದ ರಾಜರುಗಳ ಜೀವನ ಚರಿತ್ರೆ ಎಲ್ಲೆಡೆ ಪ್ರಸಾರವಾಗ ಬೇಕು. ಇಂದು ಜಗತ್ತಿನಲ್ಲೆಡೆ ದೇಶ – ದೇಶಗಳ ನಡುವೆ ವೈಮನಸ್ಯ, ಯುದ್ಧ ಇವೆಲ್ಲವು ಮನುಕುಲವನ್ನು ನಾಶಪಡಿಸುವಷ್ಟು ಬೆಳೆದಿವೆ. ಪ್ರತಿಯೊಂದು ದೇಶವು ಕೂಡ ರಕ್ಷಣೆಯ ಹೆಸರಿನಲ್ಲಿ ನೂರಾರು–ಸಾವಿರಾರು ಅಣ್ವಸ್ತ್ರಗಳನ್ನು ಸಿದ್ಧಪಡಿಸಿಕೊಡಿವೆ. ಧರ್ಮ, ಬಡವ–ಬಲ್ಲಿದ ಇತ್ಯಾದಿ ವಿಷಯಗಳಲ್ಲಿ ಪರಸ್ಪರ ವಿರೋಧಗಳು ಎದ್ದುಕಾಣುತ್ತಿವೆ. ಆದ್ದರಿಂದ ಮಹಾಕಾವ್ಯಗಳಲ್ಲಿ ಚಿತ್ರಿತರಾದ ರಾಜರುಗಳ ಜೀವನಮೌಲ್ಯಗಳನ್ನು ಅವಲಂಬಿಸಿದರೆ ಸಮಸ್ತ ವಿಶ್ವವು ಯಾವುದೇ ಭಯವಿಲ್ಲದೇ, ರೋಗ–ರುಜಿನವಿಲ್ಲದೇ, ಪರಸ್ಪರ ದ್ವೇಷವಿಲ್ಲದೇ ಇರಬಲ್ಲದು. ಆದ್ದರಿಂದ ಪ್ರತಿಯೊಬ್ಬರೂ ಈ ಮಹಾಕಾವ್ಯವನ್ನು ಓದಿ ಉತ್ತಮ ಸಮಾಜನಿರ್ಮಾಣ ಮಾಡಬೇಕೆಂಬುದೇ ಆಶಯವಾಗಿದೆ.

ಪರಾಮರ್ಶನ ಗ್ರಂಥಗಳು (Bibliography)

ಅ.ಸಂ	ಗ್ರಂಥದ ಹೆಸರು	ಸಂಪಾದಕ/ಲೇಖಕ	ಲಿಪಿ	ಪ್ರಕಾಶಕ	ಮುದ್ರಣ ವರ್ಷ
೧	ಋಕ್ಸಂಹಿತಾ	ಸ್ವಾಮಿ ಚಿದಾನಂದ	ಕನ್ನಡ	ರಾಮಕೃಷ್ಣ ಆಶ್ರಮ ಬೆಂಗಳೂರು	೧೯೮೫
೨	ಪುರುಷಸೂಕ್ತಭಾಷ್ಯ	ಲೇ. ಹೆಚ್. ಎಸ್. ಲಕ್ಷ್ಮೀನರಸಿಂಹ ಮೂರ್ತಿ	ಕನ್ನಡ	ಆಧ್ಯಾತ್ಮಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ	೧೯೯೪
೩	ಮನುಸ್ಮೃತಿ	ಪಂ. ಗಿರಿಜಾ ಪ್ರಸಾದ್ ದ್ವಿವೇದಿ	संस्कृतम् /हिन्दी	ನವಲಕಿಶೋರ ವಿದ್ಯಾಲಯ ಲಖನೋ	೧೯೧೭
೪	ಯಾಜ್ಞವಲ್ಕ್ಯ ಸ್ಮೃತಿ	ಅನು. ನಾಗೇಶ ರಂಗೋ ಕುಲಕರ್ಣಿ	ಕನ್ನಡ	ಪ್ರತಿಭಾ ಗ್ರಂಥಮಾಲೆ ಧಾರವಾಡ	೧೯೮೦
೫	ಕೌಟಿಲೀಯ ಅರ್ಥಶಾಸ್ತ್ರ	ಸಂ. ಉದಯವೀರ ಶಾಸ್ತ್ರೀ	संस्कृतम् /हिन्दी	ಸಂಸ್ಕೃತ ಪುಸ್ತಕಾಲಯ, ಲಾಹೌರ	೧೯೨೦
೬	ಶ್ರೀಮದ್ವಾಲ್ಮೀಕಿ ರಾಮಾಯಣ	ಸಂ. ಭಾರತದರ್ಶನ ಸಂಪಾದಕ ಮಂಡಳಿ	ಕನ್ನಡ	ಭಾರತದರ್ಶನ ಮುದ್ರಣಾಲಯ, ಬೆಂಗಳೂರು	೨೦೧೪
೭	ವಾಲ್ಮೀಕಿ ರಾಮಾಯಣಂ	ಸಂ. ಎನ್. ರಂಗನಾಥ ಶರ್ಮಾ	ಕನ್ನಡ	ರಾಮಾಯಣ ಪ್ರಕಾಶನ ಸಮಿತಿ ಬೆಂಗಳೂರು	೧೯೮೬
೮	ಶ್ರೀಮನ್ಮಹಾಭಾರತ	ಸಂ. ಭಾರತದರ್ಶನ ಸಂಪಾದಕ ಮಂಡಳಿ	ಕನ್ನಡ	ಭಾರತದರ್ಶನ ಮುದ್ರಣಾಲಯ, ಬೆಂಗಳೂರು	೨೦೧೪
೯	ಭಾರತೀಯದರ್ಶನ	ಕರ್ನಾಟಕ ಸರ್ಕಾರ	ಕನ್ನಡ	ಕರ್ನಾಟಕ ಪಠ್ಯಪುಸ್ತಕ ವಿಭಾಗ	೧೯೯೩
೧೦	ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ	ಕರ್ನಾಟಕ ಸರ್ಕಾರ	ಕನ್ನಡ	ಕರ್ನಾಟಕ ಪಠ್ಯಪುಸ್ತಕ ವಿಭಾಗ	೧೯೯೩
೧೧	ಧಾತುಪಾಠ	ಪಾಣಿನಿ	संस्कृतम्	ಚೌಕಾಂಬಾ ಸಂಸ್ಕೃತ ಸೀರೀಜ್,ವಾರಾಣಸಿ	೧೯೬೯
೧೨	ಸಂಸ್ಕೃತಧಾತುಕೋಶ	ಯುಧಿಷ್ಠಿರ ಮೀಮಾಂಸಕ	संस्कृतम् /हिन्दी	ರಾಮಲಾಲ್‌ಕಪೂರ್ ಟ್ರಸ್ಟ್, ಸೋನೀಪತ್	೧೯೯೦
೧೩	ಅಮರಕೋಶ	ಅಮರಶಕ್ತಿಃ	संस्कृतम्	ನಿರ್ಣಯಸಾಗರ ಪ್ರಕಾಶನ,ಮುಂಬಯಿ	೧೯೬೯

೧೪	ಷಡ್ದರ್ಶನಂ	ಶ್ರೀಗಂಗಾವಿಷ್ಣುಃ	संस्कृतम्	ಶ್ರೀವೇಂಕಟೇಶ್ವರಪ್ರೆಸ್	೧೮೪೭
೧೫	ಅರ್ಥಸಂಗ್ರಹ	ಲೌಗಾಕ್ಷಿಭಾಸ್ಕರ	संस्कृतम्	ಚೌಕಾಂಬಾ ಸಂಸ್ಕೃತ ಸೀರೀಜ್,ವಾರಾಣಸಿ	೧೯೮೨
೧೬	ಸರ್ವದರ್ಶನಸಂಗ್ರಹ	ಸಾಯಣಮಾಧವ	संस्कृतम्	ನಿರ್ಣಯಸಾಗರ ಪ್ರಕಾಶನ,ಮುಂಬಯಿ	೧೯೨೪
೧೭	ಭಗವದ್ಗೀತಾ	ಸಂ. ಎನ್. ರಂಗನಾಥ ಶರ್ಮಾ	ಕನ್ನಡ	ಗೀತಾ ಬುಕ್ ಹೌಸ್ ಮೈಸೂರು	೧೯೯೭
೧೮	ಕನ್ನಡ ಸಂಸ್ಕೃತ ಶಬ್ದಕೋಶ	ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯ	ಕನ್ನಡ	ಬಾಪ್ಕೊ ಪ್ರಕಾಶನ ಬೆಂಗಳೂರು	೧೯೬೧
೧೯	ಹಿಂದೂ ದರ್ಶನ ಸಾರ	ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ	ಕನ್ನಡ	ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು	೧೯೮೫
೨೦	ಜೈಮಿನೀಯ ನ್ಯಾಯಮಾಲಾವಿಸ್ತರ	ಮಾಧವಾಚಾರ್ಯಃ	संस्कृतम्	ಆನಂದಾಶ್ರಮ ಪ್ರೆಸ್, ಪುನಾ	೧೮೯೨
೨೧	ಮೀಮಾಂಸಾದರ್ಶನ	ಮಹಾಪ್ರಭುಲಾಲ್ ಗೋಸ್ವಾಮಿ	संस्कृतम् /हिन्दी	ತಾರಾ ಬುಕ್ ಎಜೆನ್ಸಿ, ವಾರಾಣಸಿ	೧೯೮೪
೨೨	ಮಹಾಭಾಷ್ಯ ಪಸ್ಪಶಾಹ್ನಿಕ	ಸಂ. ರಮಣಕುಮಾರ ಶರ್ಮಾ	संस्कृतम् /हिन्दी	ಈಸ್ಟರ್ನ ಬುಕ್ ಲಿಂಕರ್ಸ್, ದಿಲ್ಲಿ	೧೯೮೨
೨೩	ರಘುವಂಶ ಮಹಾಕಾವ್ಯಂ	ಸಂ. ರಾಮಚಂದ್ರ ಝಾ	संस्कृतम् /हिन्दी	ಧರ್ಮಕೂಪ, ವಾರಾಣಸೀ	೧೯೭೦
೨೪	ರಘುವಂಶ ಮಹಾಕಾವ್ಯಂ	ಸಂ. ಜ್ವಾಲಾಪ್ರಸಾದ ಮಿಶ್ರಾ	संस्कृतम् /हिन्दी	ಶ್ರೀ ವೇಂಕಟೇಶ್ವರ ಪ್ರೆಸ್	೧೯೦೭
೨೫	ಕುಮಾರಸಂಭವಂ	ಸಂ. ವಿಠಲದೇಬುನಿ ಸುಂದರಶರ್ಮಾ	संस्कृतम् /हिन्दी	ಸಂಸ್ಕೃತಭಾಷಾ ಪ್ರಚಾರಿಣೀ ಸಭಾ, ಚಿತ್ತೂರ್	೧೯೭೫
೨೬	ಕುಮಾರಸಂಭವಂ	ಸಂ. ಮಹಾವೀರಪ್ರಸಾದ ದ್ವಿವೇದಿ	संस्कृतम् /हिन्दी	ಇಂಡಿಯನ್ ಪ್ರೆಸ್ ಲಿಮಿಟೆಡ್, ಇಲಾಹಾಬಾದ್	೧೯೨೩
೨೭	ಕುಮಾರಸಂಭವಂ	ಸಂ. ಸುಧಾಕರ ಮಾಲವೀಯ	संस्कृतम् /हिन्दी	ಕೃಷ್ಣದಾಸ ಅಕಾಡಮಿ ವಾರಾಣಸಿ	೧೯೯೭
೨೮	ಕುಮಾರಸಂಭವಂ	ಸಂ. ವಿರಾಜ	हिन्दी	ಸಂಸ್ಕೃತಭಾಷಾಪ್ರಚಾರಿಣೀ ಸಭಾ, ಚಿತ್ತೂರ್	೨೦೦೮
೨೯	ಕಿರಾತಾರ್ಜುನೀಯಂ	ಸಂ. ರಾಮಪ್ರತಾಪ ತ್ರಿಪಾಠಿ	संस्कृतम् /हिन्दी	ಇಲಹಾಬಾದ	೨೦೧೪
೩೦	ಕಿರಾತಾರ್ಜುನೀಯಂ	ಸಂ. ದುರ್ಗಾಪ್ರಸಾದ್ ಮತ್ತು ಕಾಶೀನಾಥ ಶರ್ಮಾ	संस्कृतम्	ನಿರ್ಣಯಸಾಗರ ಮುದ್ರಣಾಲಯ, ಮುಂಬಯಿ	೧೯೦೭

೩೧	ಕಿರಾತಾರ್ಜುನೀಯಂ	ಸಂ. ಶೋಭಿತಮಿಶ್ರಾ	संस्कृतम् /हिन्दी	ಚೌಕಾಂಬಾ ಪುಸ್ತಕಾಲಯ, ಬನಾರಸ್	೧೯೫೨
೩೨	ಶಿಶುಪಾಲವಧಂ	ಅನು. ರಾಮಪ್ರತಾಪ ತ್ರಿಪಾಠೀ	संस्कृतम् /हिन्दी	ಹಿಂದಿ ಸಾಹಿತ್ಯ ಸಮ್ಮೇಲನ ಮುದ್ರಣಾಲಯ, ಪ್ರಯಾಗ್	೨೦೦೯
೩೩	ಶಿಶುಪಾಲವಧಂ	ಅನು. ದುರ್ಗಾಪ್ರಸಾದ್ ಮತ್ತು ಶಿವದತ್ತ	संस्कृतम्	ನಿರ್ಣಯಸಾಗರ ಮುದ್ರಣಾಲಯ, ಮುಂಬಯಿ	೧೯೪೦
೩೪	ಮಹಾಕವಿ ಮಾಘ	ಮನಮೋಹನ ಲಾಲ್ ಜಗನ್ನಾಥ ಮಿಶ್ರಾ	हिन्दी	ನವಯುಗ ಪ್ರಕಾಶನ ದಿಲ್ಲಿ	೧೯೬೩
೩೫	ನೈಷಧೀಯಚರಿತಂ	ದೇವರ್ಷೀ ಸನಾಢ್ಯ	संस्कृतम् /हिन्दी	ವಾರಾಣಸೀ	೧೯೬೦
೩೬	ನೈಷಧೀಯಚರಿತಂ	ಸಂ. ಪಂ.ಶಿವದತ್ತ ಶರ್ಮಾ	संस्कृतम्	ನಿರ್ಣಯಸಾಗರ ಮುದ್ರಣಾಲಯ, ಮುಂಬಯಿ	೧೯೧೮
೩೭	ನೈಷಧೀಯಚರಿತ ಚರ್ಚಾ	ಸಂ. ಶ್ರೀದುಲಾರೇಲಾಲ ಭಾರ್ಗವ್	हिन्दी	ಗಂಗಾ ಪುಸ್ತಕಮಾಲಾ, ಲಕ್ನೋ	೧೯೩೩
೩೮	ಸಂಸ್ಕೃತ ಧಾತು ಕೋಶ	ಸಂ. ಯುಧಿಷ್ಠಿರ ಮೀಮಾಂಸಕ	हिन्दी	ರಾಮಲಾಲ್ ಕಪೂರ ಟ್ರಸ್ಟ್, ಹರಿಯಾಣಾ	೧೯೬೦
೩೯	ಸುಭಾಷಿತ ತ್ರಿಶತೀ	ಸಂ. ದಾಮೋದರ ಧರ್ಮಾನಂದ ಕೊಸಂಬೀ	हिन्दी	ನಿರ್ಣಯಸಾಗರ ಮುದ್ರಣಾಲಯ, ಮುಂಬಯಿ	೧೯೫೭
೪೦	ಬಾಣ ಕಾದಂಬರೀ	ಅನು. ಗಂಗಾಧರ ಮಡಿವಾಳೇಶ್ವರ ತುರಮರಿ	ಕನ್ನಡ	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು	೨೦೦೩
೪೧	ವಿಷ್ಣುಪುರಾಣ	ಸಂ. ಥಾನೇಶಚಂದ್ರ ಉಪ್ರೈತಿ	संस्कृतम्	ಪರಿಮಲ ಪಬ್ಲಿಕೇಶನ್ಸ್	೨೦೦೩
೪೨	ಮಹಾನಾರಾಯಣ ಉಪನಿಷತ್	ಲೇ. ಹೆಚ್. ಎಸ್. ಲಕ್ಷ್ಮೀನರಸಿಂಹ ಮೂರ್ತಿ	ಕನ್ನಡ	ಆಧ್ಯಾತ್ಮಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ	೧೯೮೯
೪೩	ಪದ್ಮಪುರಾಣ	ಮಹಾದೇವ ಚಿಮಣಾಜೀ ಆಪಟೆ	संस्कृतम्	ಆನಂದಾಶ್ರಮ ಮುದ್ರಣಾಲಯ	೧೮೯೪